


ವಿಖ್ಯಾತ ವಿಜ್ಞಾನಿ

ರಾಮನ್

(ಜೀವನ - ಸಾಧನೆ)

ಹಂಪ. ನಾಗರಾಜಯ್ಯ

ಪ್ರಚಾರ ಪುಸ್ತಕ ಮಾಲೆ - ೧೬೧

ಪ್ರಸಾರಾಂಗ,

ಮೈಸೂರು ವಿಶ್ವವಿದ್ಯಾನಿಲಯ

೧೯೬೮

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೧೬೧

ವಿಖ್ಯಾತ ವಿಜ್ಞಾನಿ

ರಾಮನ್

ಹಂಪ. ನಾಗರಾಜಯ್ಯ

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೧೯೬೮

ಮೊದಲನೆಯ ಮುದ್ರಣ : ೧೯೬೮
೩೦೦೦ ಪ್ರತಿಗಳು

ಪ್ರಕಾಶಕರು :
ಡೈರೆಕ್ಟರ್, 'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು – ೬

ಬೆಲೆ :

ಸಾಧಾರಣ ಪ್ರತಿ ೨೫ ಪೈಸೆ
ಉತ್ತಮ ಪ್ರತಿ ೩೭ ಪೈಸೆ

ಮುದ್ರಕರು :
ಶ್ರೀ ರಾಜೇಶ್ವರಿ ಎಲೆಕ್ಟ್ರಿಕ್ ಪ್ರೆಸ್
ಜಗನ್ಮೋಹನ್ ಪ್ಯಾಲೇಸ್ ರೋಡ್, ಮೈಸೂರು.

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿಸಿ ಸಮಷ್ಟಿ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶೆಯನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆ ಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು, ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭ ಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ

ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನಗಳು ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು, ಗಳಿಸಿರುವ ಜ್ಞಾನವನ್ನು ಜನ ಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟು ಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳುವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ.

ಈ ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ, ಮುಂತಾದ ವಿಷಯಗಳನ್ನು ಕುರಿತ ನೂರ ಅರವತ್ತು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀ ಹಂಪ ನಾಗರಾಜಯ್ಯ ಅವರ 'ವಿಖ್ಯಾತ ವಿಜ್ಞಾನಿ ರಾಮನ್' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು
೧೮-೧೦-೧೯೬೮

ಕೆ. ಎಲ್. ಶ್ರೀಮಾಲಿ
ವೈಸ್-ಛಾನ್ಸಲರ್

ಸಿ. ವಿ. ರಾಮನ್

ನೋಬೆಲ್ ಪಾರಿತೋಷಕ ವಿಜೇತ, ಭಾರತರತ್ನ ಚಂದ್ರ ಶೇಖರ ವೆಂಕಟರಾಮನ್ ಅವರು ಎಂಬತ್ತರ ತುಂಬು ಜೀವನ ದಲ್ಲಿಯೂ ವಿಜ್ಞಾನ ವಿಶ್ವದಲ್ಲಿ ತಾಪಸಿಕ ಹಟದಿಂದ ವಿಸ್ಮಯಗಳ ಅನ್ವೇಷಕರಾಗಿದ್ದಾರೆ. ಡಾಕ್ಟರ್ ಸರ್ ವೆಂಕಟರಾಮನ್ ಅವರು ಇತ್ತೀಚಿನ ವರ್ಷಗಳಲ್ಲಿ ತಮ್ಮ ಜನ್ಮದಿನಾಚರಣೆಯನ್ನು ಸಾರ್ವ ಜನಿಕ ಸಮಾರಂಭದ ರೂಪದಲ್ಲಿ ಆಚರಿಸಲು ಅವಕಾಶ ನೀಡುತ್ತಲಿಲ್ಲವೆಂಬುದು ನಿಜ. ಭಕ್ತಿ, ಪ್ರೀತಿ, ಗೌರವ, ವಿಶ್ವಾಸ ಪುರಸ್ಸರವಾಗಿ ಅವರ ಜನ್ಮದಿನಾಚರಣೆ ನಡೆಸುವ ಆತ್ಮೀಯರು, ಆಶ್ರಿತರು, ಸಂಬಂಧಿಕರು, ಸ್ನೇಹಿತರು, ಅನು ಯಾಯಿಗಳು, ಸಹಯೋಗಿಗಳು, ಶಿಷ್ಯರು ಎಲ್ಲರೂ ಅವರಿಗಿ ದ್ದಾರೆ. ಆದರೆ ರಾಮನ್ ಅವರು ದಿನದಿನಕ್ಕೆ ತಾನೇ ತಾನಾಗುತ್ತ, ಇಷ್ಟು ವಿಸ್ತಾರ ವಿಶ್ವ ಕುಟುಂಬವನ್ನು ದೂರ ಸರಿಸುತ್ತ, ವಿಜ್ಞಾನ ಲೋಕದಲ್ಲಿ ಏಕಾಕಿಯಾಗಿ ವಿಹರಿಸುತ್ತ, ಇನ್ನೂ ವಿಶ್ವ ದಾಖಲೆಗಳನ್ನೇ ಸ್ಥಾಪಿಸುತ್ತಿದ್ದಾರೆ. ಅವರಿಗೆ ಎಂಬತ್ತು ವರ್ಷ ಎಂದಾಗ ಅವರನ್ನು ನೋಡಿದವರು, ಅವರೊಡನೆ ಮಾತಾಡಿದವರು ಮತ್ತು ಅವರೊಡನೆ ನಡೆದಾಡುವವರು ನಂಬು ವಂತೆಯೇ ಇಲ್ಲ; ಹಾಗಿದ್ದಾರೆ ಇನ್ನೂ, ದೇಹದಾರ್ಢ್ಯದಲ್ಲಿ. ನೇರಕ್ಕೆ ಆರಡಿ ಹತ್ತಿರ ಎತ್ತರದ ನಿಲುವು, ಹದವಾದ ಗಟ್ಟಿ ಮುಟ್ಟಾಗಿರುವ ಎದೆ ಹೆಗಲುಗಳು; ಹೊಟ್ಟೆಯಾದರೋ, ಇನ್ನೂ ಮೂವತ್ತರ ಹರೆಯದವರಂತೆ, ಹೊರಬಂದಿಲ್ಲ; ಬೆನ್ನಂತೂ ಕೊಂಚವೂ ಬಾಗಿಲ್ಲ. ಮಿಡಿಗಪ್ಪು ಬಣ್ಣದ

ಮೊಗದಲ್ಲಿ ಅರೆಮುಚ್ಚಿಕೊಂಡಿರುವ ಕಣ್ಣುಗಳು, ಮೊಂಡ ಮೂಗು, ಬಿಗಿದ ತುಟಿ; ತಲೆಗೆ ಹಳೆಯ ಕಾಲದ ಮುಂಡಾಸು ಬಡಿಗೆ, ಪಡುವಣ ಉಡಿಗೆ ತೊಡಿಗೆ; ರಾಮನ್‌ರು ಇನ್ನೂ ರಾಣೀ ಸರಕಾರದ ಕಾಲದ ಹಿರಿಯರ ಹೆಮ್ಮೆ ಹೆಗ್ಗಳಿಕೆಗಳ ಹೊರನೋಟವನ್ನು ಕೊಡುತ್ತಾರಾದರೂ, ಮಾತುಕತೆಗಳಲ್ಲಿ ಇಂದು ನಿನ್ನೆಯಲ್ಲಿಲ್ಲ, ನಾಳೆಯಲ್ಲಿದ್ದಾರೆ. ಕಾಲವೇಗವನ್ನು ಸರಿಗಟ್ಟಿ, ಹಿಂದೆಹಾಕಿ, ಮುಂದೆ ಹೋಗುತ್ತಿದ್ದಾರೆ. ಮಾತನಾಡ ತೊಡಗಿದರೆ ಹುರುಪು ಹುಮ್ಮಸ್ಸುಗಳು ಚಿಮ್ಮುತ್ತವೆ. ಆ ಭರದಲ್ಲಿ ಅವರ ಮುಂಡಾಸು ಮೂರು ಸುತ್ತು ತಿರುಗಿರುತ್ತದೆ. ಮೊದಲೇ ಉಡಿಗೆ ತೊಡಿಗೆಗಳ ಬಗ್ಗೆ ಕಾಳಜಿಯಿಲ್ಲ. ಅವರ ಅಂಗಿಯು ತೋಳ ಬಳಿಯೋ, ಕೊರಳ ಪಟ್ಟಿಯ ಅಟ್ಟೆ ಯಲ್ಲಿಯೋ ಹರಿದಿರುತ್ತದೆ; ಒಮ್ಮೊಮ್ಮೆ ಕೊಳೆ ಜಿಡ್ಡು ಕಂಡರೂ ಅಚ್ಚರಿ ಪಡಬೇಕಾದುದಿಲ್ಲ. ಅಂಗಿ ಹೀಗಾದರೆ ಮೇಲಂಗಿಯ ಹೊಲಿಗೆಗಳಾದರೂ ಬಿಚ್ಚಿರುತ್ತವೆ. ಅಥವಾ ಅದನ್ನು ಎಲ್ಲಾದರೂ ಬಿಚ್ಚಿಸಿ ಹೊಲಿಸಿರುವುದು ಕಂಡುಬರು ತ್ತದೆ. ಅವರ ಉದ್ದನೆಯ ಚಲ್ಲಣ, ಹಳೆಯ ಕಾಲದ ಎದೆಯ ಮಟ್ಟದ್ದು. ಹಾಗೆ ನೋಡುವುದಾದರೆ ಮುಂಡಾಸೇ ಇದ್ದದ್ದರಲ್ಲಿ ಬೆಳ್ಳಗೆ ಇರುತ್ತದೆ. ಮಾತನಾಡಲು ಬರಮಾಡಿಕೊಳ್ಳುವುದೆಂದರೆ, ಮತ್ತೆ ಅವರನ್ನು ಮಾತನಾಡಿಸಲು ಹೋಗುವುದೇ ತಪ್ಪು. ಕರೆದು ಮಾತನಾಡಿಸತೊಡಗಿದರೆ ಅವರು ಬಿಟ್ಟಾಗಲೇ ಹೊರಡು ವುದು. ಹೆಜ್ಜೆಹೆಜ್ಜೆಗೂ ಕಡುಮಾತು ಬಲುಬೇಗ. ಹಾಗೆಂದು ಹೇಳಿ ಯಾವಾಗಲೂ ಸಿಟ್ಟೆಂದೇನಲ್ಲ. ಆದರೆ ಅವರಿಗೆ ಸಿಟ್ಟಿಲ್ಲ ವೆಂದರೆ ದೊಡ್ಡತಪ್ಪು ಮಾಡಿದಂತಾಗುತ್ತದೆ. ಆ ಸಿಟ್ಟು ಯಾವಾಗ ಬರುವುದೆಂಬುದು ಅವರಿಗೂ ತಿಳಿಯಲಿಕ್ಕಿಲ್ಲ. ಅದು

ಬಂದಾಗ ಅವರೊಡನೆ ಹೆಚ್ಚು ಮಾತು ಬೆಳೆಸುವವರಿಗೆ ಜಾಣತನ ಕೊಂಚ ಕಡಮೆಯೇ. ರಾಮನ್‌ರಿಗೊಗ್ಗಿದಂತೆ ಮಾತನಾಡಬಲ್ಲವರು ಬೇಕಾದಂತೆ ಅವರೊಡನೆ ಮಾತನಾಡುತ್ತ ಕುಳಿತುಕೊಳ್ಳಬಹುದು. ಅವರ ಮೆಚ್ಚಿಕೆಯ ವಿಜ್ಞಾನದ ವಿಷಯಗಳ ಬಗ್ಗೆ ಬೆದಕಿ, ಕೆದಕಿ ಕೇಳಬಹುದು, ಹೇಳಬಹುದು, ಅವರಿಗೆ ಬೇಡವಾದ ವಿಷಮ ವ್ಯಕ್ತಿಗಳ ಪ್ರಸ್ತಾಪವೆತ್ತಿ ಅವರ ವ್ಯಂಗ್ಯ, ವಿಡಂಬನೆ, ಕಟೂಕ್ತಿಗಳನ್ನು ಕೇಳಬಹುದು. ಅಂತೂ ಕೆಲ ಮಟ್ಟಿಗೆ ರಾಮನ್ನರೊಬ್ಬ ಅವಧೂತ ಪುರುಷರಂತೆ ಕಾಣುತ್ತಾರೆ.

ರಾಮನ್‌ರು ಇಂದಿಗೂ ಭಾರತದಲ್ಲಿ ವಿಜ್ಞಾನದ ಪುನರುತ್ಥಾನ ಚಳುವಳಿಯ ನಾಯಕ. ಅದೇ ಅಂದೋಲನದಲ್ಲಿ ಅವರೀಗ ಹಲವು ವರ್ಷಗಳನ್ನು ಕಳೆದಿದ್ದಾರೆ. ಅಂದು ಅವರು ವಿಜ್ಞಾನ ವಿಶ್ವಕ್ಕೆ ಧುಮುಕುವಾಗ ಯಾವ ಸ್ವಾಭಿಮಾನ, ಹೆಮ್ಮೆ, ಆತ್ಮಧೈರ್ಯ, ಅಜೇಯ ಹಟ ಇಟ್ಟುಕೊಂಡಿದ್ದರೋ, ಅದೊಂದರಲ್ಲಿಯಾದರೂ ಲವಲೇಶ ಕುಂದು ಇಂದಿಗೂ ಕಾಣದು. ಆ ಮಟ್ಟಿಗೆ ಅವರು ಛಲದಂಕಮಲ್ಲ. ಭಾರತದ ಸಾಧಾರಣ ಮತ್ತು ಜ್ಞಾನದ ಪುನರುತ್ಥಾನ ಯುಗ (Fra of social reformation & Renaissance) ಕಳೆದ ಶತಮಾನದ ಅಂತ್ಯಕ್ಕೆ ಉಚ್ಛ್ರಾಯ ಕಾಲವನ್ನು ಕಂಡಿತ್ತು. ಅಲ್ಲಿಂದ ಈ ಶತಮಾನದ ಆರಂಭದಲ್ಲಿ ಆದೇ ಎತ್ತರದಲ್ಲಿ ಉಳಿದಿತ್ತು. ಆ ಕಾಲದ ಶಿಶು ರಾಮನ್. ಆದರೆ ಅವರು ಸುಧಾರಣವಾದಿಯಾಗಲಿಲ್ಲ. ಅಥವಾ ಕೇವಲ ಪ್ರಾಚೀನ ಜ್ಞಾನದ ಪುನರುತ್ಥಾನಕ್ಕೆ ಮನಸೋಲಲಿಲ್ಲ. ಬದಲಾಗಿ ವಿಜ್ಞಾನದ ಪುನರುತ್ಥಾನದಲ್ಲಿ ತೊಡಗಿದರು ಭಾರತಕ್ಕೆ ವಿಜ್ಞಾನ ಲೋಕದ ನಕ್ಷೆಯಲ್ಲಿ ಸ್ಥಳ ಕಲ್ಪಿಸಿ ರೂಪರೇಷೆ ಕೊಟ್ಟರು. ನಿಜವಾಗಿ

ನೋಡಿದರೆ, ಕಳೆದ ಅರ್ಧ ಶತಮಾನದ ಭಾರತದ ವೈಜ್ಞಾನಿಕ ಪ್ರಗತಿಯ ಕಾರಣ ಪುರುಷರಲ್ಲಿ ರಾಮನ್ನರು ಅಗ್ರಗಣ್ಯರು. ಅವರು ಭಾರತದ ವಿಜ್ಞಾನದ ಯುಗಪುರುಷರು. ವಿಜ್ಞಾನದ ಪುನರುತ್ಥಾನದ ಆಂದೋಲನವನ್ನು ಅವರು ಕಟ್ಟಿ ಬೆಳಸಿದರಷ್ಟೆ ಅಲ್ಲ. ಅದರ ನಾಯಕತ್ವವನ್ನು ಇಂದಿಗೂ ವಹಿಸಿಕೊಂಡು ಮುನ್ನಡೆಸುತ್ತಿದ್ದಾರೆ. ಅವರಲ್ಲಿ ಪೂರ್ವಾಗ್ರಹದ್ವೇಷ ದೂಷಣೆಗಳೂ, ಲೋಪದೋಷಗಳೂ ಇದ್ದರೆ, ಅದಕ್ಕೆ ಅವರ ಚಕ್ರ ದೃಷ್ಟಿಯ ವಕ್ರತೆಯೇ ಕಾರಣ.

ಇಂದು ಭಾರತದಲ್ಲಿ ಮನುಷ್ಯನ ವ್ಯಷ್ಟಿ ಸಮಷ್ಟಿಗಳ ಸಾಮಾಜಿಕ ಜೀವನದಲ್ಲಿ ವೈಜ್ಞಾನಿಕ ದೃಷ್ಟಿಯೇ ಬೆಳೆದಿಲ್ಲ. ಆದರೆ ವೈಜ್ಞಾನಿಕ ಅನ್ವೇಷಣೆ – ಅಧ್ಯಯನಗಳು ನಡೆದಿವೆ. ತಾಂತ್ರಿಕ ಪ್ರಗತಿ ಪುರೋಭಿವೃದ್ಧಿಗಳಾಗಿವೆ. ಆ ದೃಷ್ಟಿಯೊಂದರ ಲೋಪದಿಂದಾಗಿ ಸಾಮಾಜಿಕ ಸುಧಾರಣೆಗಳಾಗಿಲ್ಲ. ಅದೊಂದೇ ನಿಟ್ಟಿನ ವಿಫಲತೆಯಿಂದಾಗಿ ದೇಶದ ನಾಗರಿಕ, ಸಾಂಸ್ಕೃತಿಕ ಉನ್ನತಿ ಉತ್ಕರ್ಷಗಳ ಮಾತು ಹೋಗಲಿ, ರಾಜಕೀಯ ಉತ್ಕ್ರಾಂತಿಯೂ ಕೂಡ ಆಗಿಲ್ಲ; ಆಧುನಿಕ ಯುಗವಾಣಿ ಕೇಳಿಸುತ್ತಿದ್ದರೂ ಭಾರತವು ಮನುಷ್ಯ ಮನುಷ್ಯರ ಸಮಾನತೆಯನ್ನು ಒಪ್ಪಿ ಬೆಳೆಯುತ್ತಿಲ್ಲ. ಇನ್ನೂ ರೂಢಮೂಲವಾದ– ಜನ್ಮದಿಂದ ನೀಚೋಚ್ಚ ಭಾವಂಗತವಾಗುವ – ಅಭಿಶಾಪದಿಂದ ವಿಮುಕ್ತಿಯಾಗಿಲ್ಲ. ಇದಕ್ಕೆ ಕಾರಣ ವಿವಿಧ ರಂಗಗಳ ನಾಯಕರು. ವಿಜ್ಞಾನರಂಗವೂ ಇದಕ್ಕೆ ಹೊರತಾಗಿಲ್ಲ. ಹೀಗಾಗಿ ಇಲ್ಲಿ ತಾಂತ್ರಿಕ ಪ್ರಗತಿಯಾದಂತೆ ನೀಚೋಚ್ಚ ಪಕ್ಷಪಾತದ ಸಮಾಜ ವ್ಯವಸ್ಥೆಯಲ್ಲಿ ವಿಷಮ ಪರಿಸ್ಥಿತಿ ವಿಸ್ತರಿಸುತ್ತಿದೆ. ಇವೆಲ್ಲ ವಿಷಯಗಳ ಕುರಿತು ವಿದೇಶಗಳ ವಿಜ್ಞಾನಿಗಳಂತೆ ಭಾರತದ

ವಿಜ್ಞಾನಿಗಳು ಚಿಂತನ ಮಂಥನವನ್ನು ನಡೆಸಿಲ್ಲ. ಈ ವಿಶಾಲ ದೃಷ್ಟಿಯಿಂದ ನೋಡಿದಾಗ ರಾಮನ್‌ರು ಕೂಡ ಈ ನಿಟ್ಟಿಗೆ ಕಣ್ಣು ಹೊರಳಿಸಿಲ್ಲ ; ಅವರ ವೈಜ್ಞಾನಿಕ–ಜೀವನೇತಿಹಾಸದಲ್ಲಿ ಈ ವಿಷಯ ದೋಷವನ್ನು ಅಲ್ಲಗಳೆಯುವಂತಿಲ್ಲ ; ಇನ್ನೂ ಅವರು ಸಂಪ್ರದಾಯ ಕಟ್ಟು–ಜನಿವಾರಗಳ ಕಟ್ಟುಪಾಡು ಗಳಿಂದ ಹೊರಬಂದಿಲ್ಲ ಎಂಬಂತೆ ತಟ್ಟನೆ ತೋರಬಹುದು. ಅಲ್ಲದೆ ಅವರು ವೈಜ್ಞಾನಿಕ ಅನ್ವೇಷಣೆಗಳಲ್ಲಿ ಅಂಗೀಕರಿಸಬೇಕಾದ ವರನ್ನು ಅಂಗೀಕರಿಸುತ್ತಾರೆ ; ಅದೇ ಹೊತ್ತಿಗೆ ಅವರು ಅನೇಕರ ಬಗ್ಗೆ ಅವಗಡಿಸಿಯೂ ಹೇಳುತ್ತಾರೆ. ಅವರ ವೈಯಕ್ತಿಕ ವಿಚಾರವಾಗಿ ಯಾರೂ ಇದನ್ನು ಪ್ರಶ್ನಿಸುವಂತಿಲ್ಲ.

ಭಾರತದಲ್ಲಿ ವಿಜ್ಞಾನದ ವಿಷಯದಲ್ಲಿ ಇಂದು ಕಂಡುಬರು ತ್ತಿರುವ ಉತ್ಸಾಹ ಮತ್ತು ಪ್ರಯತ್ನಗಳ ಹಿಂದೆ ರಾಮನ್‌ರ ಪ್ರೋತ್ಸಾಹ ಪರಿಶ್ರಮಗಳಿವೆ. ಹಾಗೆಂದು ಹೇಳಿ ಅವರೇ ಅದರ ಶಕ್ತಿ ಸರ್ವಸ್ವ ಅಥವಾ ಸಾರಮಹತ್ವವಿರುವ ವ್ಯಕ್ತಿಯೆಂದು ಹೇಳ ಲಿಕ್ಕಾಗದು. ಇಂದೂ ಆ ಲೋಕದಲ್ಲಿ ಅವರು ನಾಯಕರು ಹೌದು. ಆದರೊಂದು ಮಾತು–ಅವರಿಗೆಂದಾದರೂ ತಮ್ಮ ಜೀವನದ ಸಿಂಹಾವಲೋಕನ ಮಾಡಲು ಅವಕಾಶವಾದರೆ ಅವರಿಗೆ ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆಯೆನಿಸದಿರದು ; ಸಮಾಧಾನವುಂಟಾಗ ದಿರದು. ಇನ್ನೂ ಅವರು ಅಂಥ ಅವಕಾಶವನ್ನು ತಂದುಕೊಳ್ಳುವ ಸಂಭವವೇ ಕಡಿಮೆ. ಒಂದುವೇಳೆ ಹಾಗೆ ಮಾಡಿದ್ದೇ ಆದರೆ ಅವರ ಹೆಮ್ಮೆ ಸಮಾಧಾನಗಳ ಜೊತೆಗೆ, ಉಮ್ಮಳಿಸಿ, ಅಸಂತೋಷಪಡಬೇಕಾದ ಸನ್ನಿವೇಶಗಳೂ ಎದುರು ಗೋಚರಿಸ ದಿರಲಾರವು. ಅಂತೂ ಅವರ ತಪಸ್ಸು ಒಂದರಲ್ಲಿ ಬಹುಮಟ್ಟಿಗೆ ಸಿದ್ಧಿಸಿದೆ. ಅದು ಭಾರತವನ್ನು ವಿಜ್ಞಾನ ಲೋಕದಲ್ಲಿ ತಲೆಯೆತ್ತಿ

ನಿಲ್ಲುವಂತೆ ಮಾಡಬೇಕು ಎಂದಿದ್ದುದು. ವಿಜ್ಞಾನ ಲೋಕದ ವಿವಿಧ ರಂಗಗಳಲ್ಲಿ ಪ್ರವೇಶ ಮಾಡಿ ಪ್ರಯೋಗ ನಡೆಸಿದ ಅವರು ಯಶಸ್ವಿಗಳು, ಬಹುವಿಧ ಸಾಧನೆಯ ಭಾಗ್ಯವಂತರು. ಭಾರತಕ್ಕೆ ಬಹುದೊಡ್ಡ ಬಹುಮಾನವನ್ನು ತಂದ ಬಹುಮಾನ್ಯರು, ಧನ್ಯರು. ಕಳೆದ ಶತಮಾನದ ಕೊನೆ, ಈ ಶತಮಾನದ ಆರಂಭ – ಹೀಗೆ ಒಂದು ಶತಕ ಕಾಲದಲ್ಲಿ ಈ ದೇಶದ ಹೆಸರನ್ನು ದಿಗ್ದೇಶಗಳಲ್ಲಿ ಹಬ್ಬಿಸಿದ ಶಕಪುರುಷರಲ್ಲಿ ರಾಮನ್‌ರನ್ನು ಗಣಿಸಲೇ ಬೇಕು.

ದಕ್ಷಿಣ ಭಾರತದ ತಮಿಳುನಾಡಿನ ತಿರುಚಿನಪಳ್ಳಿಯಲ್ಲಿ ೧೮೮೮ರ ನವೆಂಬರ್ ದಿನಾಂಕ ಏಳರಂದು ಚಂದ್ರಶೇಖರ ವೆಂಕಟ ರಾಮನ್‌ರು ಜನಿಸಿದರು. ಅವರ ತಂದೆಯವರು ಕರ್ಣಾಟಕ ಸಂಗೀತದ ಮಹಾಪ್ರೇಮಿ. ಸ್ವತಃ ಅವರು ತಂತೀವಾದ್ಯ ವಾದನ ದಲ್ಲಿ ನಿಪುಣರು. ವಿಶಾಖಪಟ್ಟಣದ ಕಾಲೇಜೊಂದರಲ್ಲಿ ಅವರು ಗಣಿತ ಮತ್ತು ಪದಾರ್ಥ ವಿಜ್ಞಾನ ಶಾಸ್ತ್ರಗಳ ಪ್ರಾಧ್ಯಾಪಕ ರಾಗಿದ್ದರು. ಅದೇ ಕಾಲೇಜಿನಲ್ಲಿ ರಾಮನ್‌ರು ತಮ್ಮ ಆರಂಭದ ಶಿಕ್ಷಣವನ್ನು ಪಡೆದರು. ಹದಿನಾರನೆಯ ವರ್ಷದಲ್ಲಿಯೇ ಅವರು ಪದವೀಧರರಾದರು. ಅದಕ್ಕೆ ಅವರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ಓದಲು ಹೋಗಿದ್ದರು. ಮುಂದೆ ಎರಡೇ ವರ್ಷಗಳಲ್ಲಿ ಅವರು ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಎರಡುಸಲ ಅವರಿಗೆ ಅತ್ಯಂತ ಉನ್ನತ ಪ್ರಶಸ್ತಿ–ಪಾರಿತೋಷಕ ಗಳೆಲ್ಲ ದೊರೆತುವು. ಅವರಿನ್ನೂ ಸ್ನಾತಕ ಪದವಿ ಪರೀಕ್ಷೆಯ ವಿದ್ಯಾರ್ಥಿಯಾಗಿದ್ದಾಗಲೇ ಸಂಶೋಧನೆಯಲ್ಲಿ ಸ್ವಂತ ಶಕ್ತಿ ಸಾಮರ್ಥ್ಯಗಳನ್ನು ತೋರಿಸಿದರು. ಸ್ವತಂತ್ರವಾಗಿ ವೈಜ್ಞಾನಿಕ ಅನ್ವೇಷಣೆಗಳನ್ನು ನಡೆಸಿ ಆವಿಷ್ಕಾರಗಳನ್ನು ಮಾಡಲು ಯತ್ನಿಸಿ ದವರು. ದೃಗ್ಜ್ಯೋತಿರ್ವಿಜ್ಞಾನ ಮತ್ತು ಧ್ವನಿವಿಜ್ಞಾನಗಳಲ್ಲಿ

ಅವರು ನಡೆಸಿದ ಅನ್ವೇಷಣೆಗಳ ವಿವರಣಾತ್ಮಕ ಲೇಖನಗಳು ೧೯೦೭ರಷ್ಟು ಹಿಂದೆಯೇ ನೇಚರ್ ಮತ್ತು ಫಿಲಾಸಾಫಿಕಲ್ ಮೆಗಜಿನ್ (Nature and Philosophical Magazine) ಎಂಬ ಪ್ರಸಿದ್ಧ ವೈಜ್ಞಾನಿಕ ಪತ್ರಿಕೆಯಲ್ಲಿ ಪ್ರಕಟವಾಗಿದ್ದವು. ಆ ಕಾಲದಲ್ಲಿ ಮಹತ್ವಾಕಾಂಕ್ಷೆಯಿರುವ ತರುಣ ಭಾರತೀಯ ವಿದ್ಯಾರ್ಥಿಗೆ ವೈಜ್ಞಾನಿಕರಂಗವನ್ನು ಪ್ರವೇಶಿಸಲು ಅನುಕೂಲವಾದ ಅವಕಾಶವಿರಲಿಲ್ಲ. ಆದುದರಿಂದ ರಾಮನ್‌ರು ಅಂದಿನ ಬ್ರಿಟಿಷ್ ಭಾರತ ಸರ್ಕಾರವು ನಡೆಸಿದ ಪರೀಕ್ಷೆಯೊಂದಕ್ಕೆ ಕಟ್ಟಿ ಸ್ಪರ್ಧಿಸಿ ಅತ್ಯಂತ ಉನ್ನತ ಪ್ರಶಸ್ತಿ ಪಾರಿತೋಷಕಗಳನ್ನು ಪಡೆದರು.

ರಾಮನ್‌ರು ಹತ್ತೊಂಬತ್ತನೆಯ ವಯಸ್ಸಿನಲ್ಲಿಯೇ ಭಾರತ ಸರಕಾರದ ಹಣಕಾಸಿನ ಶಾಖೆಯಲ್ಲಿ ಹಿರಿಯ ಅಧಿಕಾರಿಗಳಾದರು. ಸುಮಾರು ೧೯೦೭ರಿಂದ ೧೯೧೭ರವರೆಗೆ ಅವರು ತುಂಬ ಚಾಕಚಕ್ಯತೆಯಿಂದ ಸೇವೆ ಸಲ್ಲಿಸಿದರು. ಆ ಅವಧಿಯ ಬಹುಭಾಗ ಅವರು ಕಲಕತ್ತದಲ್ಲಿಯೇ ಇದ್ದರು. ಸರಕಾರೀ ಸೇವೆಯಲ್ಲಿದ್ದರೂ ಅವರು ತಮ್ಮ ವೈಜ್ಞಾನಿಕ ಅನ್ವೇಷಣೆಗಳ ಕಾರ್ಯವನ್ನು ಬಿಟ್ಟಿರಲಿಲ್ಲ. ಒಟ್ಟು ಮೂವತ್ತು ಮೂಲ ಮಹತ್ವದ ಸಂಶೋಧನ ಪತ್ರಗಳನ್ನು ಅವರು ನೇಚರ್, ಫಿಲಾಸಾಫಿಕಲ್ ಮೆಗಜಿನ್ ಫಿಸಿಕಲ್ ರಿವ್ಯೂ ಇವೇ ಮೊದಲಾದ ಪತ್ರಿಕೆಗಳಲ್ಲಿ ಬರೆದು ಪ್ರಕಟಿಸಿದರು. ಅನಾನುಕೂಲ ಪರಿಸ್ಥಿತಿಯಲ್ಲಿಯೂ ಕೂಡ ವೈಜ್ಞಾನಿಕ ಪ್ರಯೋಗ ಪರೀಕ್ಷೆಗಳನ್ನು ಮಾಡುತ್ತ ಸಂಶೋಧನೆ ನಡೆಸುತ್ತಿದ್ದ ರಾಮನ್‌ರ ಬಗ್ಗೆ ಕಲಕತ್ತದ ವೈದುಷ್ಯವರ್ತುಲಗಳಲ್ಲಿ ವಿಶೇಷ ಗೌರವವುಂಟಾಯಿತು. ಅದು ವಂಗಾಭಿಮಾನವು ಉಕ್ಕೇರುತ್ತಿದ್ದ ಕಾಲ. ಪ್ರತಿ ಬ್ರಿಟಿಷನಿಗೂ ಪ್ರತಿ ಭಾರತೀಯ

ಸರಿಮಿಗಿಲೆನಿಸಬೇಕು, ಎಂದು ಬಂಗಾಳಿಗಳು ಹಟತೊಟ್ಟ ದಿನ ಗಳು. ಅಂದು ಕಲಕತ್ತ ವಿಶ್ವವಿದ್ಯಾನಿಲಯದ ಉಪ ಕುಲಪತಿ ಗಳಾಗಿ ಪ್ರಸಿದ್ಧ ವಿದ್ವಾಂಸ ಸರ್ ಆಶುತೋಷ ಮುಖರ್ಜಿಯವ ರಿದ್ದರು. ಅವರು ವಿಶ್ವವಿದ್ಯಾನಿಲಯದಲ್ಲಿ ಅದೇ ಆಗ ಸ್ಥಾಪಿಸಿದ್ದ ತಾರಕಾನಾಥ ಪಾಲಿಟ್‌ರ ದತ್ತಿಯ, ಪದಾರ್ಥ ವಿಜ್ಞಾನ ಪೀಠವನ್ನು ಅಲಂಕರಿಸಲು ರಾಮನ್‌ರನ್ನು ಆಮಂತ್ರಿಸಿದರು. ಪಾಲಿಟ್‌ರು ಅಂದಿನ ಶ್ರೀಮಂತ ಗಣ್ಯ ವಕೀಲ. ಸರ್ ಆಶುತೋಷ ಅವರ ಮಗನೇ ಡಾ|| ಶ್ಯಾಮಪ್ರಸಾದ ಮುಖರ್ಜಿ ಅವರು.

ರಾಮನ್‌ರು ಸರ್ ಆಶುತೋಷರ ಆಮಂತ್ರಣವನ್ನು ಸ್ವೀಕರಿ ಸಿದರು. ಅದೇನು ಸಣ್ಣ ಮಾತಲ್ಲ. ಬ್ರಿಟಿಷ್ ಭಾರತ ಸರಕಾರ ದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅತ್ಯಂತ ಉನ್ನತ ಪ್ರಶಸ್ತಿ ಪಾರಿತೋಷಕಗಳ ವಿಜೇತ ಉನ್ನತಾಧಿಕಾರಿಗೆ ಅಧಿಕಾರ, ಸ್ಥಾನ –ಮಾನ ಮತ್ತು ಧನದೌಲತ್ತಿನ ಅನುಕೂಲತೆಗಳನ್ನು ಬಿಟ್ಟು ಸ್ವಲ್ಪ ಸಂಬಳಕ್ಕೆ ವಿಶ್ವವಿದ್ಯಾನಿಲಯದ ಶಿಕ್ಷಕ ಪೀಠವೊಂದನ್ನು, ಅದು ಎಷ್ಟೇ ವಿಶಿಷ್ಟವಾಗಿದ್ದರೂ, ಅಲಂಕರಿಸ ಬಯಸುವುದು ಅಸಾಮಾನ್ಯವೇ ಆಗಿತ್ತು. ಆದರೆ ರಾಮನ್‌ರಿಗೆ ವಿಜ್ಞಾನ ದಲ್ಲಿದ್ದ ಆಸಕ್ತಿ ಅಪಾರ. ಅಷ್ಟೆ ಅಲ್ಲ, ಭಾರತವನ್ನು ವಿಜ್ಞಾನ ವಿಶ್ವದ ನಕ್ಷೆಯಲ್ಲಿ ಮೂಡಿಸಬೇಕೆಂಬ ಆತುರ. ಬಂಗಾಳಿಗಳ ಉಕ್ಕೇರುತ್ತಿದ್ದ ಅಭಿಮಾನಕ್ಕೂ ರಾಮನ್‌ರ ಆತುರಕ್ಕೂ ಸರಿ ಜೋಡಿಯಾಯಿತು. ಅಂತೂ ಅವರು ಪಾಲಿಟ್ ಪದಾರ್ಥ ವಿಜ್ಞಾನ ಪೀಠವನ್ನು ಅಲಂಕರಿಸಿದ್ದರಿಂದ, ಅವರ ವೈಜ್ಞಾನಿಕ ಅನ್ವೇಷಣಕಾರ್ಯಗಳಿಗೆ ಸಂಪೂರ್ಣ ಸಮಯ–ಸಾಮರ್ಥ್ಯಗಳು ಸಿಕ್ಕಿದವು. ಅದಕ್ಕೆ ಬೇಕಾದ ಸಂಪತ್ತಿನ ಪ್ರಶ್ನೆ. ಆಶುತೋಷ

ರಂತಹ ಅಭಿಮಾನಿ ಉಪಕುಲಪತಿ ಮತ್ತು ಬಂಗಾಳಿಗಳು ಸಾಧ್ಯವಿದ್ದಷ್ಟು ಮಟ್ಟಿಗೆ ಆ ನಿಟ್ಟಿನಲ್ಲಿ ನೆರವಿಗಿದ್ದರು. ಮುಂದೆ ಹದಿನಾರು ವರುಷಗಳವರೆಗೆ ಅವರು ಪಾಲಿಟ್ ಪೀಠದಲ್ಲಿ ರಾರಾಜಿಸಿದರು. ಅದೇ ಕಾಲಕ್ಕೆ ಕಲಕತ್ತದಲ್ಲಿದ್ದ ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸಾಯಿನ್ಸ್ (Indian Association for the cultivation of Sciences)ನ ಕಾರ್ಯದರ್ಶಿಗಳೂ ಆಗಿದ್ದರು. ಅದರ ಪ್ರಯೋಗಶಾಲೆಯಲ್ಲಿಯೇ ರಾಮನ್‌ರ ವೈಜ್ಞಾನಿಕ ಪ್ರಯೋಗ ಪರೀಕ್ಷೆಗಳ, ಅನ್ವೇಷಣೆಗಳ ಕಾರ್ಯ ಕಾಲು ಶತಮಾನ ಕಾಲ ನಡೆಯಿತು.

ರಾಮನ್‌ರು ೧೯೩೩ರಲ್ಲಿ ಬೆಂಗಳೂರಿನ ಪ್ರಸಿದ್ಧ ತಾತಾ ವಿಜ್ಞಾನ ಮಂದಿರ–ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸಾಯಿನ್ಸ್ –ಅಥವಾ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯಿನ್ಸ್ ಅನ್ನು ಸೇರಿದರು. ಅನೇಕ ವಿಜ್ಞಾನಿಗಳು ವ್ಯಕ್ತಿವಿಶಿಷ್ಟವಾದಿಗಳು. ಅಂದರೆ ಅವರ ವೈಯಕ್ತಿಕವಾದ ಅಥವಾ ವ್ಯಕ್ತಿತ್ವವಾದವು ವಿಶಿಷ್ಟವಾಗಿ ಅವರ ಕಾರ್ಯಕ್ಷೇತ್ರವನ್ನು ಅವರಲ್ಲಿಯೇ ಪರಿಮಿತಗೊಳಿಸಿ ಸೀಮಿತಗೊಳಿಸುವಂತಹುದು. ಆದರೆ ರಾಮನ್‌ರದು ಹಾಗಲ್ಲ. ಅವರು ವಿಜ್ಞಾನ ಪ್ರಪಂಚದಲ್ಲಿ ಸಾಮೂಹಿಕ, ಸಾಮುದಾಯಿಕ ನಾಯಕತ್ವವನ್ನು ವಹಿಸಿದವರು. ಅಂತೆಯೇ ತಾತಾ ವಿಜ್ಞಾನ ಮಂದಿರದ ವಿವಿಧ ವಿಭಾಗಗಳನ್ನು ಅವರು ಸರಿಪಡಿಸುವುದರಲ್ಲಿ ಅಪಾರವಾಗಿ ಶ್ರಮಿಸಿದರು. ಆ ಮುಂಚೆ ಪಾಲಿಟ್ ಪದಾರ್ಥ ವಿಜ್ಞಾನ ಪೀಠವನ್ನು ಸಂಘಟಿಸಿದ ಅನುಭವ ಜ್ಞಾನಗಳಿದ್ದವು ಅವರಿಗೆ. ಅಲ್ಲದೆ ಬ್ರಿಟಿಷ್ ಭಾರತ ಸರಕಾರದ ಹಣಕಾಸಿನ ಹಿರಿಯ ಅಧಿಕಾರಿಯಾಗಿದ್ದು ಕೆಲಸ ಮಾಡಿದಾಗಿನ

ಜ್ಞಾನಾನುಭವಗಳು ಬೇರೆ. ವೈಯಕ್ತಿಕ ಮಟ್ಟದಲ್ಲಿ ರಾಮನ್‌ರು ವಿಜ್ಞಾನ ರಂಗದಲ್ಲಿ ಮಾಡಿದ ಸಾಧನೆ ತುಂಬ ಪರಿಣಾಮಕಾರಿ. ಆದರೆ ಅದಕ್ಕಿಂತಲೂ ಹೆಚ್ಚಾಗಿ ಅವರು ಭಾರತದ ವೈಜ್ಞಾನಿಕ ಅನ್ವೇಷಕ ಸಮೂಹಕ್ಕಿತ್ತ ಉತ್ತೇಜನ, ಪ್ರೋತ್ಸಾಹಗಳು ಮುಖ್ಯಮಹತ್ವದವು. ಅವರ ಸಂಖ್ಯೆ ಅಪಾರ ವೆಂದೇ ಹೇಳಬೇಕು. ಇಂದು ಭಾರತದ ವಿಶಿಷ್ಟ ವೈಜ್ಞಾನಿಕ ಅನ್ವೇಷಕ ವರ್ಗವು ಜಗತ್ತಿನಲ್ಲಿ ಖ್ಯಾತವಾಗಿದ್ದರೆ ಅದಕ್ಕೆ ರಾಮನ್‌ರು ಬಲುಮಟ್ಟಿಗೆ ಕಾರಣರು. ಅವರು ವಿಜ್ಞಾನಾನ್ವೇಷ ಕರ ತಂಡ ತಂಡಗಳನ್ನೇ ನಿರ್ಮಿಸಿದರು.

ರಾಮನ್‌ರ ತಂದೆಯವರು ಗಣಿತದಲ್ಲಿ ಪರಿಣತರಾದರೂ ರಾಮನ್‌ರೇನೋ ಅದನ್ನು ವಿಶೇಷ ಕರಗತ ಮಾಡಿಕೊಂಡವರಲ್ಲ. ಅಂದರೆ ಅವರಿಗಿರುವ ವೈಜ್ಞಾನಿಕ ರಂಗದಲ್ಲಿ ಬೇಕಾದ ಗಣಿತ ಜ್ಞಾನವು ಅವರಿಗಿದೆ. ಅದು ಸಾಮಾನ್ಯ ಪ್ರಾಧ್ಯಾಪಕರ ಗಣಿತ ಜ್ಞಾನವಲ್ಲ. ಆದರೆ ತಂದೆಯ ಪದಾರ್ಥವಿಜ್ಞಾನ ಜ್ಞಾನದ ಹಲವು ಹತ್ತುಪಟ್ಟು ಜ್ಞಾನವನ್ನು ಅವರು ಸಾಧಿಸಿದರಷ್ಟೇ ಅಲ್ಲ, ಜಗತ್ತಿನ ಅಗ್ರಗಣ್ಯ ಪದಾರ್ಥ ವಿಜ್ಞಾನಿಗಳ ಪಟ್ಟದ ಸಾಲಿನಲ್ಲಿ ನೆಲೆನಿಂತರು. ತಂದೆಗಿದ್ದ ಸಂಗೀತದಲ್ಲಿ ರಾಮನ್‌ರಿಗೆಷ್ಟು ಅಭಿ ರುಚಿಯಿದೆ ಎಂಬುದೊಂದು ಪ್ರಶ್ನೆ. ಚಿಕ್ಕಂದಿನಿಂದಲೇ ಸಂಗೀತ ದಲ್ಲಿ ಅಭಿರುಚಿಯಿರಬೇಕಲ್ಲ—ಎಂದು ಅವರ ಬಗ್ಗೆ ಅನ್ನಿಸುವುದು ಸ್ವಾಭಾವಿಕ. ಆದರೆ ಈ ಪ್ರಶ್ನೆಗುತ್ತರವಾಗಿ ರಾಮನ್‌ರು ತಮ್ಮ ಬೀರುವಿನಿಂದ ೧೮೮೫ರಲ್ಲಿ ಪ್ರಕಟವಾದ ಹರ್ಮಸ್ ಎಲ್. ಎಫ್. ಹೆಲ್ಮ್‌ಹೋಲ್ಟ್ಸ್‌ರ 'ಸಂಗೀತದ ಸಿದ್ಧಾಂತ' (ಥಿಯರಿ ಆಫ್ ಮ್ಯೂಸಿಕ್) ಎಂಬ ಪುಸ್ತಕವನ್ನು ಕೈಗೆತ್ತಿಕೊಂಡು ಧೂಳು ಜಾಡಿಸುತ್ತ ಹೇಳುತ್ತಾರೆ, ಅದರ ಪುಟಗಳನ್ನು ತಿರುಗಿಸಿ ಹಾಕಿ

"ನಾನು ಕಾಲೇಜು ಕಲಿಯುತ್ತಿದ್ದಾಗ ಈ ಪುಸ್ತಕವನ್ನು ಓದಿದ್ದೆ. ಈಗ ಇದನ್ನು ಹುಳು ತಿನ್ನುತ್ತಿದೆ. ಈ ಪುಸ್ತಕದ ಬಗ್ಗೆ ಕಾಳಜಿ ಮಾಡಲು ನನಗೆ ಹೊತ್ತೇ ಇಲ್ಲ" ಅದರಲ್ಲಿ ಪಿಟೀಲು ತಂತಿಗಳ ಕುರಿತು ಒಂದು ಪ್ರಕರಣವಿದೆ. ಆ ಮಹತ್ವದ ಪ್ರಕರಣದಲ್ಲಿ "ವಯೊಲಿನ್ ಬೋ ದಿಂದ ಉಂಟಾಗುವ ತಂತಿಯುಸ್ಪಂದನಗಳಿಗೆ ಸಂಬಂಧಿಸಿದಂತೆ ಯಾವುದೇ ಯಾಂತ್ರಿಕ ಸಿದ್ಧಾಂತವನ್ನು ಪ್ರತಿಪಾದಿಸಲು ಶಕ್ಯವಿಲ್ಲ" ಎಂಬ ವಾಕ್ಯವು ಎಳೆಯ ವಿಜ್ಞಾನಿ ರಾಮನ್‌ರನ್ನು ಅಂದು ಆಕರ್ಷಿಸಿತು. ಈ ವಾಕ್ಯವೇ ಅವರಿಗೆ ಸಮ್ಮತವಾಗಲಿಲ್ಲ. ಅವರ ಲಕ್ಷ್ಯವನ್ನು ತಡೆದು ನಿಲ್ಲಿಸಿದ ಈ ವಾಕ್ಯ ಅವರ ವಿಚಾರಲಹರಿಯನ್ನು ಪೂರ್ತಿ ಕೆರಳಿಸಿತು. ಇದೊಂದು ಸವಾಲೆಂದು ಅವರು ಬಗೆದರು.

ಆ ಉದ್ವೇಗದಲ್ಲಿ, ಆವೇಶದಲ್ಲಿ ಅದೊಂದು ವಾಕ್ಯದ ಸವಾಲನ್ನು ಸ್ವೀಕರಿಸಿ, ಪ್ರಯೋಗ ಪರೀಕ್ಷೆಗಳಿಂದ ಗೆದ್ದೇತೀರಬೇಕೆಂದು ಜಿದ್ದು ಕಟ್ಟಿಕೊಂಡರು ರಾಮನ್. ಏನು ಮಾಡಿದರೂ ಆ ವಾಕ್ಯವು ಅವರನ್ನು ಪೂರ್ತಿಯಾಗಿ ಹಟಕಟ್ಟಿಸಿತು. ಅಂತೆಯೇ ಅವರು ಕೆಲವರ್ಷಗಳವರೆಗೆ ತನಗೆ ತಿಳಿದಂತೆ ಪ್ರಯೋಗಪರೀಕ್ಷೆಗಳನ್ನು ಮಾಡತೊಡಗಿದರು. ಕೇವಲ ಮೂರೇ ವರ್ಷಗಳಲ್ಲಿ ಅಂದರೆ ೧೯೧೮ರಿಂದ ೧೯೧೭ರ ನಡುವಿನ ಅವಧಿಯಲ್ಲಿ, ರಾಮನ್‌ರು ವೈಲಿನ್ 'ಬೋ' ಉಂಟುಮಾಡುವ ತಂತಿಯ ಸ್ಪಂದನಕ್ಕೆ ಯಾಂತ್ರಿಕ ಸಿದ್ಧಾಂತವನ್ನು ಪ್ರತಿಪಾದಿಸಿದರು. ಆವಿಷ್ಕಾರ ಅಥವಾ ಅನ್ವೇಷಣೆಯ ರಂಗದ ಈ ಸಾಧನೆ ಅವರ ಆರಂಭದ ಯಶಸ್ಸು. ಈ ವಿಷಯದ ಪಠ್ಯಪುಸ್ತಕಗಳಲ್ಲಿ ಮೇಲಿಂದಮೇಲೆ ಉದ್ಧರಿಸಲಾಗುವಂತಹುದು ಈ ಸಿದ್ಧಾಂತ. ಅಷ್ಟೇ ಅಲ್ಲ, ಈ ಸಿದ್ಧಾಂತಕ್ಕೆ ವಿದ್ವಾಂಸರಿಂದ ವಿಶೇಷ

ಮನ್ನಣೆಯೂ ಸಿಕ್ಕಿತು. ಪದಾರ್ಥ ವಿಜ್ಞಾನದ ಮೇಲೆ ೧೯೨೭ ರಲ್ಲಿ ಪ್ರಕಟಿಸಿದ ಜರ್ಮನ್ ವಿಶ್ವಕೋಶದಲ್ಲಿ ಧ್ವನಿವಿಜ್ಞಾನ ಸಂಪುಟಕ್ಕೆ ವಾದ್ಯಗಳ ಮೇಲೆ ಲೇಖನ ಬರೆಯಲು ಅವರಿಗೆ ಆಮಂತ್ರಣ ಬಂದಿತು. ರಾಮನ್‌ರ ಹದಿನೆಂಟನೆಯ ವಯಸ್ಸಿನಲ್ಲಿಯೇ ವೈಜ್ಞಾನಿಕ ಆವಿಷ್ಕಾರಕ್ಕೆ ಸಂಬಂಧಿಸಿದ ಅವರ ಲೇಖನಗಳು ಪ್ರಕಟವಾಗಿದ್ದವಷ್ಟೆ. ಅವರ ವಯಸ್ಸಿನ ೨೮ಕ್ಕೆ ಅವರು ಈ ಸಿದ್ಧಾಂತವನ್ನು ಪ್ರತಿಪಾದಿಸಿದರು. ಮುಂದೆ ೩೮ನೆಯ ವಯಸ್ಸಿಗೆ ಜರ್ಮನ್ ವಿಶ ಕೋಶಕ್ಕೆ ಈ ಲೇಖನವನ್ನು ಬರೆದು ಜಾಗತಿಕ ಖ್ಯಾತಿಯನ್ನು ಗಳಿಸಿದರು. ನಭೋಜ್ವಲ ಪ್ರತಿಭೆ ಅವರದೆಂದು ಪ್ರಶಂಸೆ ದೊರೆಯಿತು.

ರಾಮನ್‌ರಿಗೆ ಐವತ್ತು ವರ್ಷವಾದಾಗ ಅವರ ಜನ್ಮದಿನದ ಸ್ವರ್ಣಮಹೋತ್ಸವಕ್ಕೆ ಜಗತ್ತಿನಾದ್ಯಂತದಿಂದ ಮೆಚ್ಚುಗೆಗಾರರು, ಗೆಳೆಯರು ಮತ್ತು ಅವರ ಕೈಯಲ್ಲಿ ಕಲಿತವರು ಕಳುಹಿಸಿದ ಒಟ್ಟು ಒಳ್ನುಡಿಗಳ ರಾಶಿಯನ್ನು ನೋಡಿದರೆ ಅವರ ಶಿಷ್ಯ ಸಂಪತ್ತಿ, ಮಿತ್ರ ಸಂಪತ್ತಿ, ಅನುಯಾಯಿ ಸಂಪತ್ತಿ ಮತ್ತು ಅನುಭೂತಿ ಸಂಪತ್ತಿಯ ಅಂದಾಜು ಆಗದಿರದು. ಆಗಲೇ ನೂರಾರು ಜನ ಭಾರತೀಯ ವಿಜ್ಞಾನಾನ್ವೇಷಕರು ಜಗತ್ತಿನಾದ್ಯಂತ ಖ್ಯಾತರಾಗಿದ್ದರು. ಅವರಲ್ಲಿ ಗಣಿತಜ್ಞರಿದ್ದರು, ಪದಾರ್ಥ ವಿಜ್ಞಾನಿಗಳಿದ್ದರು, ರಸಾಯನ ವಿಜ್ಞಾನಿಗಳಿದ್ದರು, ಭೂಭೌತ ವಿಜ್ಞಾನಿಗಳಿದ್ದರು. ಆ ಎಲ್ಲ ತರುಣರನ್ನೂ ಭಾರತದಾದ್ಯಂತದಿಂದ ಆಕರ್ಷಿಸಿದ ಶ್ರೇಯ ಅವರದು. ವೈಯಕ್ತಿಕ ಪ್ರಯತ್ನ ಪರಿಶ್ರಮಗಳಿಂದ, ಪ್ರಯೋಗ ಪರೀಕ್ಷೆಗಳಿಂದ ಸ್ವಂತವಾಗಿ ಅನ್ವೇಷಣ ಕಾರ್ಯ ನಡೆಸಲು ಅವರಿಗೆಲ್ಲ ಪ್ರಚೋದಿಸಿದವರು ರಾಮನ್‌ರು. ಎಷ್ಟೋಸಲ ಅಗತ್ಯವಾದ ಅನುಕೂಲ

ಮತ್ತು ಸರಿಯಾದ ಉತ್ತೇಜನಗಳನ್ನು ರಾಮನ್‌ರು ತಾವೇ ಒದಗಿಸುತ್ತಿದ್ದರು. ಅವರ ಈ ಪ್ರೋತ್ಸಾಹದ ಫಲ ಗಣನೀಯ. ಅವರಲ್ಲಿದ್ದ ಸುಪ್ತಶಕ್ತಿಯ ಆವಿಷ್ಕಾರವಾಗಿ ಅವರು ಧೀಮಂತ, ಸ್ವಾವಲಂಬೀ ವಿಜ್ಞಾನಿಗಳಾದರು. ವಿಜ್ಞಾನಕ್ಕೆ ಮತ್ತು ಅದರ ಉಪಾಸನೆಗೆ ಅವರು ಬದ್ಧರಾದರು. ಈ ಸಾಧನೆಯ ಬಗ್ಗೆ ರಾಮನ್‌ರನ್ನು ಕೊಂಡಾಡದವರಿಲ್ಲ.

ಇಂದು ರಾಮನ್‌ರು ತಯಾರಿಸಿದ ಈ ತಂಡಗಳ ವಿಜ್ಞಾನಿಗಳು ಭಾರತದಲ್ಲಿ ಮತ್ತು ವಿದೇಶಗಳಲ್ಲಿ ವಿಜ್ಞಾನ ಶಾಲೆಗಳಲ್ಲಿ ಅತ್ಯುನ್ನತ ಸ್ಥಾನಮಾನಗಳಲ್ಲಿದ್ದರೆಂದರೆ ಅದು ಎಷ್ಟೊಂದು ಸಮಾಧಾನದ, ಸಂತೋಷದ ಸಂಗತಿ. ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕ-ಶಿಕ್ಷಕ-ಸ್ಥಾನಗಳಲ್ಲಿ, ಸರಕಾರಗಳ ಮತ್ತು ಖಾಸಗಿಯವರ ಪ್ರಯೋಗ ಶಾಲೆಗಳಲ್ಲಿ ಅವರು ಮಾಡುತ್ತಿರುವ ಕೆಲಸದಿಂದ ಭಾರತದ ಬುದ್ಧಿ ಮತ್ತೆ ವಿಜ್ಞಾನರಂಗದಲ್ಲಿ ಕೂಡ ಎಷ್ಟು ಪ್ರಗಾಢವಾದುದು ಎಂಬುದನ್ನು ಎತ್ತಿ ಹೇಳುವಂತಾಗಿದೆ. ವಿದೇಶಗಳ ಅನೇಕ ವಿಜ್ಞಾನಾನ್ವೇಷಕರಿಗಿಂತ ಅವರು ಸರಿಮಿಗಿಲೆನಿಸಿಕೊಂಡಿರುವುದು ಅಭಿಮಾನದ ಸಂಗತಿಯೇ ಸರಿ. ಆ ದೇಶಗಳಲ್ಲಿ ಅವರು ಸಂಶೋಧನ ಕೇಂದ್ರಗಳ ಮಹತ್ವದ ಅಧಿಕಾರಿಗಳಾಗಿ ಕೂಡ ಮೆರೆಯುತ್ತಿದ್ದಾರೆ. ಶುದ್ಧ ಪದಾರ್ಥ ವಿಜ್ಞಾನದಲ್ಲಿ ಹಿಂದೆ ರಾಮನ್‌ರ ವಿದ್ಯಾರ್ಥಿಗಳಾಗಿದ್ದವರು ಇಂದು ಭಾರತನಲ್ಲಿ ಅಭಿವೃದ್ಧಿರಂಗದಲ್ಲಿ ವಿಶಿಷ್ಟ ಕೊಡುಗೆಗೆ ಕಾರಣರಾಗಿರುವರು ಪವನಶಾಸ್ತ್ರ, ಭೂಕಂಪಶಾಸ್ತ್ರ ಮತ್ತು ಭೂಗುಣಶಾಸ್ತ್ರಗಳಲ್ಲಿ ಅವರ ಸಾಧನೆಗಳು ತುಂಬ ಉಪಯುಕ್ತವಾಗಿವೆ. ಇಷ್ಟೊಂದು ಫಲಕಾರಿಯಾಗಲು ಅವರೆಲ್ಲ ರಾಮನ್‌ರು ತಮ್ಮ ಸಂಸ್ಥೆಗಳಲ್ಲಿ ಹೇಳಿಕೊಟ್ಟ ಸಂಶೋಧನ ಪದ್ಧತಿಗಳನ್ನು ಅನುಸರಿಸಿದ್ದೇ ಕಾರಣವೆಂದು ಹೇಳಲಾಗುತ್ತಿದೆ.

ರಾಮನ್‌ರು ತಮ್ಮ ಸಂಶೋಧನ ಪದ್ಧತಿಯನ್ನು ತಮ್ಮದಾದ ರೀತಿಯಲ್ಲಿಯೇ ಬೆಳೆಸಿಕೊಂಡವರು. ಅವರು ಯಾವುದೇ ವಿದೇಶೀಯ ಪ್ರಯೋಗಶಾಲೆಯಲ್ಲಿ ಪರಿಣತಿ ಪಡೆದು ಬಂದವರಲ್ಲ. ಭಾರತದಲ್ಲಿಯಂತೂ ಅವರ ಕಾಲದಲ್ಲಿ ಅಂಥ ಮಾರ್ಗದರ್ಶನ ಮಾಡುವ ಪ್ರಯೋಗಶಾಲೆಗಳಿರಲಿಲ್ಲ. ಅವರಿಗೆ ಸಿಕ್ಕಿದ ಪ್ರಯೋಗಶಾಲೆಗಳ ಪ್ರಯೋಜನವನ್ನು ಅವರು ತನಗೆ ತಿಳಿದ ರೀತಿಯಲ್ಲಿ ಪಡೆದವರು. ವಿದೇಶಗಳನ್ನು ಸಂದರ್ಶಿಸಿದಾಗ, ಅಲ್ಲಿಲ್ಲ ಸಂಚರಿಸುವಾಗ ಪ್ರಯೋಗಶಾಲೆಗಳನ್ನು ಸಂದರ್ಶಿಸಿ ನೋಡಿದ್ದೆಷ್ಟೋ, ಕೇಳಿದ್ದೆಷ್ಟೋ, ತಿಳಿದಿದ್ದೆಷ್ಟೋ, ಅಷ್ಟೆ, ಅವರ ಸಂಶೋಧನ ಪದ್ಧತಿಗೆ ಹೊರಗಿನ ಪ್ರಭಾವ – ಪರಿಣಾಮಗಳು. ಅಂತೆಯೇ ಅವರ ವೈಜ್ಞಾನಿಕ ಅನ್ವೇಷಣ ಪದ್ಧತಿಯಲ್ಲಿ ಪ್ರಯತ್ನ ಪರಿಶ್ರಮಗಳ ಪ್ರಯೋಗಗಳು, ತಪ್ಪು ತಡೆಗಳನ್ನು ಸರಿಪಡಿಸಿಕೊಂಡು ಮುನ್ನಡೆದ ದಾರಿ ಕಂಡುಬರುತ್ತದೆ. ಎಷ್ಟೋ ಸಲ ಇದು ಕಾಲವ್ಯಯ ಕಡಮೆ ಮಾಡಿದೆ. ಕಾಲವ್ಯಯ ಹೆಚ್ಚು ಮಾಡಿದ ಸಂದರ್ಭಗಳೂ ಇರಬಹುದು. ಆದರೆ ಧನವ್ಯಯ ಮಾತ್ರ ಹೆಚ್ಚು ಮಾಡಿರುವ ಸಂದರ್ಭಗಳೇ ಕಡಮೆ. ರಾಮನ್‌ರ ವೈಜ್ಞಾನಿಕ ರಂಗದ ಸೇವೆಯು ಕೇವಲ ಅವರ ವಿದ್ಯಾರ್ಥಿಗಳಿಗೆ ಮತ್ತು ಸಹಯೋಗಿಗಳಿಗೆ ಉತ್ತೇಜನ, ಪ್ರೋತ್ಸಾಹ ಕೊಡುವಷ್ಟರ ಮಟ್ಟಿಗೆ ಮಿತಗೊಂಡಿದೆಯೆಂದು ತಿಳಿದರೆ ತಪ್ಪಾದೀತು.

ಏಕೆಂದರೆ, ಅವರು ಕೇವಲ ವಿಜ್ಞಾನಿಯಾಗಿಯೇ ಪ್ರಯೋಗ ಶಾಲೆ ಹಿಡಿದು ಕುಳಿತವರಲ್ಲ. ಕಳೆದ ಅರುವತ್ತು ವರ್ಷಗಳಲ್ಲಿ ಅವರು ಬರೆದ ಒಟ್ಟು ವೈಜ್ಞಾನಿಕ ವಾಙ್ಮಯವನ್ನೊಮ್ಮೆ ಓದಿದಲ್ಲಿ ಅವರು ದೇಶ ವಿದೇಶಗಳ ತಮ್ಮ ಸಮಕಾಲೀನ ಪೀಳಿಗೆಗಳ

ಮೇಲೆ ಎಷ್ಟೊಂದು ಪ್ರಭಾವ ಬೀರಿದ್ದಾರೆಂಬುದು ಅರ್ಥವಾಗುವುದು. ಆದರೆ ವಿಜ್ಞಾನದ ಬಗ್ಗೆ ಅನೇಕ ಆಸಕ್ತಿಗಳನ್ನು ಹುಟ್ಟಿಸುವಮಟ್ಟಿಗೆ ಮಾತ್ರ. ವೈಜ್ಞಾನಿಕ ದೃಷ್ಟಿಯನ್ನು ಜೀವನದಲ್ಲಿ ಅದರಲ್ಲಿಯೂ ದೇಶದ ಜನಜೀವನದಲ್ಲಿ ಹುಟ್ಟಿಸುವ ಮಟ್ಟಿಗೆ ರಾಮನ್‌ರು ಯಾವ ಆಕರ್ಷಣೆಯನ್ನೂ ಇಟ್ಟುಕೊಂಡಂತಿಲ್ಲ. ಅಂತೂ ವಿಜ್ಞಾನ ರಂಗದಲ್ಲಿ ಅವರು ಬೆಳೆಯುವ ಪೀಳಿಗೆಗಳಿಗೆಲ್ಲ ದಾರಿಯ ಬೆಳಕಾಗಿ, ಹುರುಪಿನ ಬುಗ್ಗೆಯಾಗಿದ್ದಾರೆಂದರೆ ಅದರಲ್ಲಿ ಅತಿಶಯ ಲವಲೇಶವಿಲ್ಲ. ಪ್ರಾರಂಭದಲ್ಲಿಯೇ ಅವರಿಗೊಂದು ವಿಷಯ ಖಚಿತವಾಯಿತು. ಬ್ರಿಟಿಷ್ ಭಾರತದಲ್ಲಿ ವಿದ್ಯಾರ್ಥಿಗಳಿಗೆ ಸಂಶೋಧನ ಕಾರ್ಯಗಳಿಗೆ ಅವಕಾಶವಾಗಬೇಕೆಂಬುದು. ಇಲ್ಲಿ ವಿಜ್ಞಾನ್ವೇಷಣ ಉತ್ಸಾಹಿಗಳಿಗೆ, ಇಚ್ಛುಕರಿಗೆ, ಅಭ್ಯರ್ಥಿಗಳಿಗೆ, ವಿದ್ಯಾರ್ಥಿಗಳಿಗೆ ಪ್ರಯೋಗಪರಿಣತಮತಿಗಳಾಗಲು ಸುಸಂಧಿ ದೊರೆಯಬೇಕು. ಅಲ್ಲಿಂದ ವಿದೇಶಗಳಲ್ಲಿ ಹೋಗಿ ಉನ್ನತಮಟ್ಟದ ಸಾಧನೆಗಳನ್ನು ಅವರು ಮಾಡಿ ಬರುವಂತಾಗಬೇಕು. ಇಲ್ಲದಿದ್ದರೆ ಭಾರತವು ವಿಜ್ಞಾನಿಗಳನ್ನು ನಿರ್ಮಿಸಲು ಸಾಧ್ಯವಿಲ್ಲ. ಇವೇ ಮುಂತಾದ ವಿಚಾರಗಳು ಅವರಿಗೆ ಸ್ಪಷ್ಟವಾದಾಗ ದೇಶದಲ್ಲಿ ಎಲ್ಲ ಕಡೆಗೂ ವೈಜ್ಞಾನಿಕ ಸಂಶೋಧನ ಮತ್ತು ಪ್ರಯೋಗಶಾಲೆಗಳ ಸ್ಥಾಪನೆಗೆ ಅವರು ಮುಂದಡಿಯಿಟ್ಟರು.

ದೇಶದಲ್ಲಿ ವೈಜ್ಞಾನಿಕರಂಗದ ಬೆಳವಣಿಗೆಗೆ ಅವರು ಕೈಕೊಂಡ ಕಾರ್ಯಕ್ರಮವನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ಒಂದು : ಸ್ವತಂತ್ರ ಪ್ರಯೋಗಶಾಲೆ—ಸಂಶೋಧನಾಲಯಗಳನ್ನು ನಿರ್ಮಿಸುವುದು ; ಎರಡು : ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಈ ವೈಜ್ಞಾನಿಕ ಸಂಸ್ಥೆಗಳಲ್ಲಿ ಉಚ್ಚದರ್ಜೆಯ ಪ್ರಯೋಗ

ಮತ್ತು ಸಂಶೋಧನ ಕ್ರಮಗಳನ್ನು ಅನುಸರಿಸುವಂತೆ ಮಾಡು ವುದು; ಮತ್ತು ಮೂರು: ಇವೆಲ್ಲ ಸಂಸ್ಥೆಗಳಲ್ಲಿಯೂ ವೈಜ್ಞಾನಿಕ ಅನ್ವೇಷಣ, ಸಂಶೋಧನೆ, ಪ್ರಯೋಗವೀಕ್ಷಣೆಗಳಲ್ಲಿ ಪರಿಣತರಾದವರನ್ನು ನೆಲೆಗೊಳಿಸುವುದು. ಇದೆಲ್ಲ ಕೇವಲ ವಿಜ್ಞಾನಿಯಾಗಿದ್ದವನಿಗೆ ಸಾಧಿಸುವಂತಹವಲ್ಲ. ಮನುಷ್ಯ ಸ್ವಭಾವ ತಿಳಿದಿರಬೇಕು. ಹಣಕಾಸಿನ ವ್ಯವಹಾರ ಗೊತ್ತಿರಬೇಕು. ಆಡಳಿತದ ಅಂಶ ಅರ್ಥವಾಗಿರಬೇಕು. ವೈದುಷ್ಯ ಪೀಠದ ಅನುಭವ ಜನ್ಯ ಜ್ಞಾನವಿರಬೇಕು. ಇವೆಲ್ಲವೂ ರಾಮನ್‌ಗಿದ್ದುವೆಂತಲೇ ಅವರು ಭಾರತದ ಪ್ರತಿಯೊಂದು ವಿಜ್ಞಾನ ಸಂಬಂಧವಾದ ಸಂಸ್ಥೆ–ವ್ಯವಸ್ಥೆಗಳಲ್ಲಿಯೂ ಒಂದಿಲ್ಲೊಂದು ಕಾಲದಲ್ಲಿ, ಒಂದಿಲ್ಲೊಂದು ರೀತಿಯಲ್ಲಿ, ಒಂದಿಲ್ಲೊಂದು ಕೆಲಸ ಮಾಡಿದ್ದಾರೆ. ದಿ ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಕಲ್ಟಿವೇಷನ್ ಆಫ್ ಸೈನ್ಸ್ ಅಂದರೆ ಭಾರತೀಯ ವಿಜ್ಞಾನಾಭಿವೃದ್ಧಿ ಸಂಸ್ಥೆಯ ಇಂದಿನ ಸುಸಂಘಟಿತ, ಸುವ್ಯವಸ್ಥಿತ ರೂಪಕ್ಕೆ ರಾಮನ್‌ರೇ ಕಾರಣರೆಂದು ಧಾರಾಳವಾಗಿ ಎಲ್ಲರೂ ಹೇಳುತ್ತಾರೆ.

ರಾಮನ್‌ರ ನಂತರ ಅವರ ಶಿಷ್ಯರಲ್ಲಿ ಒಬ್ಬರು ಅವರ ಪೀಠಕ್ಕೆ ಬಂದರು. ಪದಾರ್ಥ ವಿಜ್ಞಾನದ ಬಗ್ಗೆ ಶಾಶ್ವತ ದತ್ತಿ ಪೀಠವನ್ನು ಅವರು ಏರ್ಪಡಿಸಿದ್ದರು. ಅದರ ಆಡಳಿತದ ವ್ಯವಸ್ಥೆಯನ್ನು ಪುನರ್ಘಟಿಸಿದರು. ಉತ್ತಮ ದರ್ಜೆಯ ಪ್ರಯೋಗಶಾಲೆಯನ್ನು ಸಂಘಟಿಸಿದ್ದರು. ಅಷ್ಟೇ ಉತ್ತಮವಾದ ವೈಜ್ಞಾನಿಕ ವಾಙ್ಮಯದ ವಾಚನಾಲಯವನ್ನು ಬೆಳೆಸಿದರು. ಅಷ್ಟೇ ಅಲ್ಲ, ವಿವಿಧ ಮುಖಗಳಿಂದ ಅದಕ್ಕೆ ಸಾಕಷ್ಟು ಹಣಕಾಸು ಒದಗಿ ಬರುವಂತೆ ಮಾಡಿದ್ದರು. ಕಲಕತ್ತ ವಿಶ್ವವಿದ್ಯಾನಿಲಯದ ಸೈನ್ಸ್ ಕಾಲೇಜಿನಲ್ಲಿ ತಾನು ಅಲಂಕರಿಸಿದ್ದ ಪಾಲಿಟ್ ಪದಾರ್ಥ

ವಿಜ್ಞಾನಶಾಸ್ತ್ರದ ಪೀಠಕ್ಕೆ ಯೋಗ್ಯ ಪರಂಪರೆಯ ಅಡಿಪಾಯ ವನ್ನು ಹಾಕಿದ್ದಲ್ಲದೆ, ಅತ್ಯುತ್ತಮ ಭೌತಶಾಸ್ತ್ರ ವಿಭಾಗವನ್ನು ಸರಿಪಡಿಸಿಕೊಟ್ಟು, ತನ್ನ ಶಿಷ್ಯ ಮತ್ತು ಸಹಯೋಗೀ ವರ್ಗ ದಿಂದ ಉಜ್ವಲ ವಿಜ್ಞಾನ ವಿದ್ವಾಂಸರನ್ನೇ ಸಿಬ್ಬಂದಿಯಾಗಿ ಒದಗಿಸಿ ಬಂದಿದ್ದು ಅವರ ಕಾರ್ಯನಿಷ್ಠೆಗೆ ಸಾಕ್ಷಿ. ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ರಾಮನ್‌ರು ವಹಿಸಿದ ಆಸಕ್ತಿ ಅಪಾರ. ಅದರ ಸೈನ್ಸ್ ಮತ್ತು ಟೆಕ್ನಾಲಜಿ ಕಾಲೇಜಿನ ಬೆಳವಣಿಗೆಯಲ್ಲಿ ಅವರು ವಹಿಸಿದ ಪಾತ್ರ ಕೊಂಡಾಡುವಂತಹದು. ಇಂದಿಗೂ ವಾಲ್ಟೇರ್‌ನಲ್ಲಿರುವ ಆ ಸಂಸ್ಥೆಯು ಭಾರತದ ಉತ್ತಮ ವಿಜ್ಞಾನ ಕೇಂದ್ರಗಳಲ್ಲಿ ಒಂದೆಂದು ಪರಿಗಣಿತವಾಗಿರುವುದು. ಹಾಗೆ ನೋಡಿದರೆ ಭಾರತದ ವೈಜ್ಞಾನಿಕ ಸಂಶೋಧನಾಧ್ಯಯನ ಮತ್ತು ಪ್ರಯೋಗಾನ್ವೇಷಣ ಕೇಂದ್ರಗಳಲ್ಲಿಯೇ ಅದು ಕಿರಿಯದು.

ತಾತಾ ವಿಜ್ಞಾನ ಮಂದಿರದಲ್ಲಿ ಅವರು ಆಧುನಿಕ–ವೈಜ್ಞಾನಿಕ ದೃಷ್ಟಿಯ ನಡುವಣ ಕಾರ್ಯವನ್ನು ತುಂಬ ಚತುರತೆಯಿಂದ ಮಾಡಿದರಾದರೂ, ಅಸಮಾಧಾನಕರ ವಾತಾವರಣ ಅವರ ಮತ್ತು ಸಂಸ್ಥೆಯ ನಿಯಂತ್ರಕ ಆಡಳಿತವರ್ಗದ ನಡುವೆ ಬೆಳೆದಂತೆ ಕಾಣುತ್ತದೆ. ಅಂತೂ ರಾಮನ್‌ರು ತಾತಾವಿಜ್ಞಾನ ಮಂದಿರ ವನ್ನು ಬಿಟ್ಟರು. ಅವರೊಂದಿಗೆ ಅದೇ ಕಾರಣಗಳ ಸಲುವಾಗಿ ಇನ್ನೂ ಕೆಲವು ಜನ ಅವರು ನೇಮಿಸಿದ ಸಿಬ್ಬಂದಿ ಬಿಡಬೇಕಾ ಯಿತು. ಜೀವನದುದ್ದಕ್ಕೂ ಸ್ವಭಾವತಃ ಹೋರಾಟದ ಮನುಷ್ಯರಾಗಿ ಬಂದಿದ್ದ ರಾಮನ್‌ರು ಈ ಸಂದರ್ಭದಲ್ಲಿಯೂ ಹೋರಾಡದಿರಲಿಲ್ಲ. ಆದರೆ ಅವರ ಮನೀಷೆಯಂತೆ ಎಲ್ಲವೂ ತಾತಾ ವಿಜ್ಞಾನ ಮಂದಿರ ವ್ಯವಸ್ಥೆಯಲ್ಲಿ ನಡೆಯಲಿಲ್ಲ.

ವಿವಿಧ ವಿಶ್ವವಿದ್ಯಾನಿಲಯಗಳ ಮತ್ತು ದೇಶದ ವಿಜ್ಞಾನ ಮಂದಿರಗಳ ಕಾರ್ಯಗಳೊಡನಿದ್ದ ಅವರ ಸಂಬಂಧ ಸಂಪರ್ಕಗಳು ಎಂದಿನಂತೆ ಮುಂದುವರಿದರೂ, ಜಗತ್ತಿನ ವಿವಿಧ ದೇಶಗಳ ವಿಜ್ಞಾನ ಕೇಂದ್ರಗಳೊಡನೆ ಅವರ ಸಂಪರ್ಕ ತಡೆಹಿಡಿಯುದಿದ್ದರೂ, ಅವರಿಗೆ ಏಕಾಕಿತ್ವದ ಅನುಭವವಾದಂತಾಯಿತು. ದೇಶದಲ್ಲಿ ಸರಕಾರದ ಮಟ್ಟದಲ್ಲಿ ಸಹ ಅವರಿಗೆ ವೈಜ್ಞಾನಿಕ ವಿಭಾಗಗಳಲ್ಲಿ ತುಂಬ ಮಾನಮನ್ನಣೆಗಳ ಪ್ರಸಿದ್ಧ ಸ್ಥಾನವಿದ್ದರೂ ಅವರಲ್ಲಿ ಅತೃಪ್ತಿಯ ಅಂಶ ಅಂಕುರಿಸುತ್ತಲೇ ಹೋಯಿತು. ಕಾಲಾಂತರದಲ್ಲಿ ಅದು ಬೆಳೆದು ಬಲಿಯಿತಲ್ಲದೆ, ಕಮರಿ ಕಳಚಲಿಲ್ಲ.

ತಾತಾ ವಿಜ್ಞಾನ ಮಂದಿರದಿಂದ ಹೊರಬಿದ್ದ ರಾಮನ್ನರು ಸಂಪೂರ್ಣವಾಗಿ ತಮ್ಮ ಸಮಯ–ಸಾಮರ್ಥ್ಯ–ಸಂಪತ್ತುಗಳನ್ನು ಬೆಂಗಳೂರಿನ ಹೊರವಲಯದಲ್ಲಿರುವ–ಈಗ ಒಳವಲಯವನ್ನು ಸೇರುವಂತೆ ನಗರವು ವಿಸ್ತರಿಸುತ್ತಿದೆ-ರಾಮನ್ ಇನ್‌ಸ್ಟಿಟ್ಯೂಟ್ ಅನ್ನು ಕಟ್ಟುವುದಕ್ಕೆ ವಿನಿಯೋಗಿಸಿದರು. ಅದನ್ನು ಅವರು ಅತ್ಯಲ್ಪ ಕಾಲದಲ್ಲಿ ಕಟ್ಟಿದ್ದಷ್ಟೇ ಅಲ್ಲ, ಅತ್ಯಲ್ಪ ವೆಚ್ಚದಲ್ಲಿಯೂ ಕಟ್ಟಿದರು. ಅದೊಂದು ದಕ್ಷ ಕಾರ್ಯಕ್ಷಮ ವೈಜ್ಞಾನಿಕ ಅನ್ವೇಷಣ ಸಂಸ್ಥೆ. ಈಗಾಗಲೇ ಅದರ ಸಾಧನೆಗಳು ಲೋಕ-ವಿಖ್ಯಾತವಾಗಿವೆ. ಅದರದೇ ಆದೊಂದು ದೊಡ್ಡ ವಾಚನಾಲಯ, ಪ್ರಯೋಗಶಾಲೆ, ವಸ್ತುಸಂಗ್ರಹಾಲಯ, ವಿಸ್ತಾರ ಸಸ್ಯ ಸಂಪತ್ತಿಯ ತೋಟ, ಖಗೋಲ ಮತ್ತು ಹವಾಮಾನ ವೀಕ್ಷಣಾಲಯ ಇವೆಲ್ಲವುಗಳಿಂದ ಕೂಡಿದ ಆ ಸಂಸ್ಥೆಯು ಹಳೆಯ ಕಾಲದ ಋಷ್ಯಾಶ್ರಮ ಅಥವಾ ಗುರುಕುಲವನ್ನು ಕೆಲಮಟ್ಟಿಗೆ ಹೋಲುವಂತಿದೆ. ಅಲ್ಲಿಯ ಸಸ್ಯ ಸಂಪತ್ತಿಯಲ್ಲಿ ಅವರು ಜಗತ್ತಿನ ಯಾವಯಾವುದೋ ಭಾಗಗಳಿಂದ ತಂದು ನೆಟ್ಟ

ಬೆಳೆಸಿದಂತಹ ಅನೇಕ ಗಿಡಮರಗಳಿರುವವು. ಒಂದು ಬಾಗಿಲಲ್ಲಿ ಪ್ರವೇಶ ನಿಷೇಧಿಸುವ ಸೂಚನೆ, ಉಲ್ಲಂಘಿಸಿದವರಿಗೆ ಶಿಕ್ಷೆಗೆ ಗುರಿಮಾಡಿಸುವ ಎಚ್ಚರಿಕೆ ಹಲಗೆಗಳು ಎಲ್ಲ ಇವೆ.

ಇನ್ನೊಂದು ಬಾಗಿಲಿಗೆ ಸಂದರ್ಶಕರಿಗೆ ಅವಕಾಶವಿಲ್ಲ, ಸಂಸ್ಥೆಯ ಕಾರ್ಯಕರ್ತರಿಗೆ ಅವರ ಕರ್ತವ್ಯ, ಕಾರ್ಯ ನಿರ್ವಹಿಸಲು ಅವಕಾಶ ಕೊಡಬೇಕೆನ್ನುವ ಆಗ್ರಹ ವಾಕ್ಯಗಳಿವೆ. ಸದ್ಯ ಅದೇ ರಾಮನ್ ಅವರು ಮತ್ತು ಅವರ ಪತ್ನಿ ಲೇಡಿ ಲೋಕಸುಂದರಿ ರಾಮನ್ ಅವರು ವಾಸಿಸುತ್ತಿರುವ ಸ್ಥಳವೂ ಹೌದು. ಶ್ರೀಮತಿ ಲೋಕಸುಂದರಿಯವರು ಸ್ವತಃ ತನ್ನ ಮಟ್ಟಿಗೆ ಸಾಮಾಜಿಕ, ಸಾಂಸ್ಕೃತಿಕ, ಕಾವ್ಯಸಾಧನೆಗಳಿಂದ ಗಣ್ಯ ಸ್ಥಾನ ಪಡೆದಿರುವವರು. ಆಕೆಯೂ ಇಂಗ್ಲಿಷ್ ಮೊದಲಾಗಿ ನಾಲ್ಕಾರು ಭಾಷೆಗಳಲ್ಲಿ ಉಜ್ವಲ ಭಾಷಣಕಾರ್ತಿ. ಮುಖ್ಯವಾಗಿ ಮಕ್ಕಳ ಅಂಗವಿಕಲರ ಮತ್ತಿತರ ಮಾನವೀಯ ಸಂಬಂಧಗಳ ಉತ್ಕರ್ಷದ ಕಾರ್ಯಗಳಲ್ಲಿ ಆಕೆ ನಿರತರು. ರಾಮನ್ ದಂಪತಿಗಳು ಆ ವಿಸ್ತಾರವಾದ ಸಂಸ್ಥೆಯ ಪ್ರದೇಶದ ಪ್ರಶಾಂತ ವಾತಾವರಣದಲ್ಲಿ ಬಿಡುವಿಲ್ಲದೆ ಅವರವರ ಕಾರ್ಯಕ್ಷೇತ್ರದಲ್ಲಿ ಶ್ರದ್ಧೆ, ಆಸೆ, ಆಸಕ್ತಿಗಳಿಂದ ದುಡಿಯುತ್ತಲೇ ಇದ್ದಾರೆ. ದೇಶದಲ್ಲಿ ದಿನದಿನಕ್ಕೆ ಸ್ಥಾಪನೆಗೊಳ್ಳುತ್ತಿರುವ ವಿಶ್ವವಿದ್ಯಾನಿಲಯಗಳ ವೈಜ್ಞಾನಿಕ ವಿಷಯಗಳ ಬಗ್ಗೆ, ರಾಜ್ಯ ಮತ್ತು ಕೇಂದ್ರ ಸರಕಾರಗಳ ವೈಜ್ಞಾನಿಕ ವಿಭಾಗಗಳ ಹಾಗೂ ಖಾಸಗೀ ವೈಜ್ಞಾನಿಕ ಕೇಂದ್ರಗಳ ಸಂಬಂಧವಿನ್ನು ರಾಮನ್‌ರಿಗೆ ಎಂದಿನಂತೆ ಇದೆ.

ವಿಜ್ಞಾನ ರಂಗದಲ್ಲಿ ಮೂಲಭೂತ ಸಂಶೋಧನೆಗಳ, ಅನ್ವೇಷಣೆಗ್ಗಳ ಪ್ರಯತ್ನಗಳೂ, ಪ್ರಯೋಗಗಳೂ ನಡೆದಂತೆ, ಅವುಗಳಿಗೆ ಸಂಬಂಧಿಸಿದ ವಾಙ್ಮಯರ ಪ್ರಕಟಣೆ ಅವಶ್ಯಕವೆನಿಸಿತು.

ಭಾಗಶಃ ಈ ಅಗತ್ಯವನ್ನು 'ಬುಲೆಟಿನ್'ಗಳ ಪ್ರಕಟಣೆಯಿಂದ ಕೈಗೂಡಿಸಿಕೊಳ್ಳಲಾಯಿತಾದರೂ, ಇಷ್ಟರಿಂದಲೇ ನಡೆಯುವುದಿಲ್ಲವೆಂಬುದು ಖಚಿತವಾಯಿತು. ಅದಕ್ಕಾಗಿ ರಾಮನ್‌ರು "ಪ್ರೊಸೀಡಿಂಗ್ಸ್ ಆಫ್ ದಿ ಅಸೋಸಿಯೇಶನ್ ಫಾರ್ ದಿ ಕಲ್ಟಿವೇಶನ್ ಆಫ್ ಸೈನ್ಸ್" ಎಂಬ ಪ್ರಕಟಣೆಯನ್ನು ಪ್ರಾರಂಭಿಸಿದರು. ಅವರ ಲೇಖನಗಳಂತೂ ಆಗಲೇ ಜಗತ್ತಿನ ಹಲಕೆಲ ಪ್ರಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಬಂದಿದ್ದವು. ವಿಜ್ಞಾನವಾಙ್ಮಯ ರಂಗದಲ್ಲಿ ಅವರ ಹೆಸರು ಆಗಲೇ ಪ್ರಸಿದ್ಧವಾಗಿತ್ತು. ಸುಮಾರು ೧೯೨೬ರಿಂದ ರಾಮನ್‌ರು "ಪ್ರೊಸೀಡಿಂಗ್ಸ್" ಅನ್ನು "ಇಂಡಿಯನ್ ಜರ್ನಲ್ ಆಫ್ ಫಿಸಿಕ್ಸ್" ಎಂದು ಪ್ರಕಟಿಸ ತೊಡಗಿದರು. ಅದರಲ್ಲಿ ಭಾರತದಲ್ಲಿ ಭೌತವಿಜ್ಞಾನದಲ್ಲಿ ನಡೆದ ಪ್ರಗತಿ ಮತ್ತು ಸಾಧನೆಗಳ ವಿವರವಾದ ಪ್ರಕಟಣೆ ಪ್ರಾರಂಭವಾಯಿತು. ಅದರಲ್ಲಿಯೂ ರಾಮನ್ ಅವರು ತಮ್ಮ ಮತ್ತು ತಮ್ಮ ವಿದ್ಯಾರ್ಥಿಗಳ ಹಾಗೂ ಸಹಯೋಗಿಗಳ ಸಾಧನೆಗಳಿಗೆ ವಿಶೇಷ ಪ್ರಾಚುರ್ಯವಿತ್ತರು. ಕಲಕತ್ತದಿಂದ ಬೆಂಗಳೂರಿಗೆ ತೆರಳಿದಂದಿನಿಂದ ರಾಮನ್‌ರಿಗೆ ಈ ಪತ್ರಿಕೆಯ ಸಂಪಾದಕೀಯ ಕಾರ್ಯ ನಿರ್ವಹಿಸುವುದು ಕಷ್ಟವಾಯಿತು. ಕಾರಣ ಸ್ಥಳಾಂತರದಿಂದಾದ ದೂರ. ಆದ್ದರಿಂದಲೇ ಅವರು ಸಂಸ್ಥೆಯ ಸನ್ನಿಧಿ ಕೇಂದ್ರವೂ ಪತ್ರಿಕೆಯ ಪ್ರಕಟಣೆಯ ಸ್ಥಳವೂ ಆದ ಕಲಕತ್ತದ ವಿಜ್ಞಾನಿ ವರ್ಗಕ್ಕೇ ಪತ್ರಿಕೆಯನ್ನು ಒಪ್ಪಿಸಿಕೊಟ್ಟರು, ಅದರ ಉಚ್ಚಮಟ್ಟವನ್ನು ಕಾಯ್ದುಕೊಳ್ಳುವುದಕ್ಕಾಗಿ.

ರಾಮನ್‌ರ ದೃಷ್ಟಿಯಲ್ಲಿ ವಿಜ್ಞಾನದಂತಹ ವಿಷಯದ ಪತ್ರಿಕೆ-ಭಾರತದಿಂದಲೂ ಜಾಗತಿಕ ಉಚ್ಚ ಮಟ್ಟದಲ್ಲಿರಬೇಕೆಂಬುದಾಗಿತ್ತು. ಸ್ವತಃ ತನಗೆ ಮೇಲ್ವಿಚಾರಣೆ ನಡೆಸುವುದಾಗ

ಲಾರದು ಎಂದಾಗ ತಾನು ಅದರ ಮುಟ್ಟವಿಳಿಯುಗೊಡಬಾರದು ಎಂಬ ಅಭಿಪ್ರಾಯದವರು. ಆದರೂ ಅವರಿಗೆ ಆ ಪತ್ರಿಕೆಯ ಬಗ್ಗೆ ನಿರ್ವ್ಯಾಜವಾದ ವ್ಯಾಮೋಹವಿದ್ದಿತು. ಅಂಥ ಸಂದರ್ಭ ದಲ್ಲಿಯೂ ಅವರಿಗೆ ಪತ್ರಿಕೆಯ ನಿಯಂತ್ರಣವನ್ನು ಸ್ಥಳೀಕರಿಗೆ ಒಪ್ಪಿಸಿಕೊಡುವುದು ಅನಿವಾರ್ಯವಾಯಿತು. ಅಂಥ ಪ್ರಸಂಗವೇ ಬಂದೊದಗಿತು. ಅವರು ಬೆಂಗಳೂರಿಗೆ ಬಂದದ್ದು ೧೯೩೩ ರಲ್ಲಿ. ಅದರ ಮರುವರ್ಷವೇ ಅವರು ಇಂಡಿಯನ್ ಅಕ್ಯಾಡಮಿ ಆಫ್ ಸೈನ್ಸ್‌ಸ್‌ಅನ್ನು ಸ್ಥಾಪಿಸಿದರು. ತನ್ನ ನೇರ ನಿಯಂತ್ರಣ ನೇತೃತ್ವಗಳಲ್ಲಿ ಸಂಶೋಧನೆಯ ಚಟುವಟಿಕೆ ಪೂರ್ಣ ಕೇಂದ್ರ ವೊಂದಿರಬೇಕೆಂದು ಅವರ ಮನೀಷಿಯಾಗಿತ್ತು. ಅದರಲ್ಲಿ ಒಳ್ಳೆಯ ಉತ್ಸಾಹಿ ಯುವಜನರ ತಂಡವಿರಬೇಕು. ಅದೇ ಹೊತ್ತಿಗೆ ದೇಶದಲ್ಲಿ ವಿಶ್ವವಿದ್ಯಾನಿಲಯಗಳು ದಿನದಿನಕ್ಕೆ ಸ್ಥಾಪನೆ ಗೊಳ್ಳುತ್ತ ನಡೆದಿದ್ದವು. ಅಲ್ಲಿ ಸ್ನಾತಕ ಪದವಿಯಲ್ಲಿ ವಿಜ್ಞಾನ ವಿಷಯದಲ್ಲಿ ಪ್ರತಿಭೆ ಪಾಂಡಿತ್ಯಗಳನ್ನು ತೋರಿಸಿದ ವಿದ್ಯಾರ್ಥಿ ಗಳಿಗೆ ಅನ್ವೇಷಣೆ– ಸಂಶೋಧನೆಗಳಿಗೆ ಅವಕಾಶವಾಗುವಂತೆ ವಿಜ್ಞಾನ ಕೇಂದ್ರವಿರಬೇಕು. ಇವೇ ಮುಂತಾದ ವಿಚಾರಗಳು ಅವರಲ್ಲಿ ತಲೆದೋರಿದವು. ತತ್‌ಕ್ಷಣವೇ ಅವರು ಕಾರ್ಯ ಪ್ರವೃತ್ತರಾದರು. ಅದರ ಫಲ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್. ಅದರ ಉದ್ದೇಶಗಳಲ್ಲಿ ಒಂದನೆಯದೆಂದರೆ, ಸ್ವೀಕೃತವಾದ ವೈಜ್ಞಾನಿಕ ವಿಷಯದ ಪತ್ರಗಳನ್ನು ಪ್ರಕಟಿಸು ವುದು. ಇದು ಅತ್ಯಂತ ಮಹತ್ವದ ಕೆಲಸವೆಂದು ರಾಮನ್ ತಮ್ಮ ಮನಸ್ಸಿಗೆ ಎಂದೋ ಖಾತ್ರಿ ಮಾಡಿಕೊಂಡಿದ್ದರು.

ಎರಡನೆಯ ಉದ್ದೇಶವೆಂದರೆ – ವೈಜ್ಞಾನಿಕ ಪತ್ರಗಳನ್ನು ಕುರಿತು ಚರ್ಚಿಸುವ ಒಂದು ವೇದಿಕೆಯನ್ನು ನಿರ್ಮಿಸುವುದು.

ಮತ್ತು ಮೂರನೆಯದಾಗಿ – ಭಾರತದಲ್ಲಿ ನಡೆಯುವ ವೈಜ್ಞಾನಿಕ ಹಾಗೂ ಔದ್ಯೋಗಿಕ ಸಂಶೋಧನೆಗಳ ಸಹಯೋಗಕ್ಕಾಗಿ ಸಂಘಟನೆಯೊಂದನ್ನು ರೂಪಿಸುವುದು. ರಾಮನ್‌ರು ಸ್ವತಃ ವಹಿಸಿರುವ ಮುತುವರ್ಜಿಯಿಂದ ಇಂಡಿಯನ್ ಅಕ್ಯಾಡಮಿ ಆಫ್ ಸೈನ್ಸ್‌ಸ್ ಸಂಸ್ಥೆಯು ಕಳೆದ ೩೪ ವರ್ಷಗಳಲ್ಲಿ ಇತ್ಯೋಪಥಿತವಾಗಿ, ಯಶಸ್ವೀ ರೀತಿಯಲ್ಲಿ ಮುನ್ನಡೆದಿದೆ. ಅದರ ಸ್ಥಾಪನೆಯ ಆವಶ್ಯಕತೆಯನ್ನು ಅದು ಹೌದೆನಿಸಿದೆಯಲ್ಲದೆ ತನ್ನ ಅಸ್ತಿತ್ವವನ್ನು ಹಲವು ಹತ್ತು ರೀತಿಗಳಲ್ಲಿ ಸಮರ್ಥಿಸಿಕೊಂಡಿದೆ. ಅಕ್ಯಾಡಮಿಯಿಂದ ಮೂರು ನಿಯತಕಾಲಿಕಗಳು ಪ್ರಕಟವಾಗುತ್ತಿರುವುದನ್ನು ಅಭಿಮಾನದಿಂದ ಹೇಳುತ್ತಿರುವ ರಾಮನ್ ಅವರು ತನ್ನ ಪತ್ರಿಕೋದ್ಯಮದ ಬಗ್ಗೆಯು ಸಂತುಷ್ಟಿಯಿಟ್ಟುಕೊಂಡಿದ್ದಾರೆ. ಪ್ರತಿ ತಿಂಗಳ ಅಂತ್ಯದಲ್ಲಿ ತಪ್ಪದೆ ಪ್ರಕಟವಾಗುವ 'ಪ್ರೊಸೀಡಿಂಗ್ಸ್' ಪತ್ರಿಕೆಯಲ್ಲಿ ಭಾರತದಲ್ಲಿ ನಡೆಯುತ್ತಿರುವ ವೈಜ್ಞಾನಿಕ ಕಾರ್ಯಗಳ ವಿವರ ಬಹುಮಟ್ಟಿಗೆ ಪ್ರಕಟವಾಗುತ್ತಿದೆ. ಪ್ರಧಾನವಾಗಿ ರಾಮನ್ ಮತ್ತು ಅವರ ಶಿಷ್ಯರಿಂದ ಹಾಗೂ ಅವರ ಸಹಯೋಗಿಗಳಿಂದ ನಡೆಯುತ್ತಿರುವ ಕಾರ್ಯಗಳಿಗೆ ಪ್ರಕಟಣ ಪ್ರಶಸ್ತ್ಯವಿದೆ. ಕೆಲಕಾಲ ವಿಜ್ಞಾನವಿಶ್ವದಲ್ಲಿ ರಾಮನ್‌ರ ವಿವಾದಗಳಿದ್ದವು ಅಥವಾ ಅವರ ವಿಚಾರಗಳು ವಿವಾದಗ್ರಸ್ತವಾಗಿದ್ದವು. ಅಂಥ ವಿವಾದಗಳ ಬಗ್ಗೆ ಆಗಾಗ್ಗೆ ವಿವರಣೆ, ಸಮರ್ಥನೆ ಮತ್ತು ಸ್ಪಷ್ಟೀಕರಣಗಳನ್ನು ರಾಮನ್‌ರು ತಮ್ಮ ಪತ್ರಿಕೆಗಳಲ್ಲಿ ಕೊಡುತ್ತ ಬಂದಿರುವರು.

ರಾಮನ್‌ರು ಇತರ ಪತ್ರಿಕೆಗಳಿಗೆ ಅಂದರೆ ಹೊರಗಿನ ಪತ್ರಿಕೆಗಳಿಗೆ ಲೇಖನ ಬರೆಯುವುದು ವಿರಳ. ವಿಜ್ಞಾನ ಲೋಕದಲ್ಲಿ ಅವರ ಪುಸ್ತಕಗಳು ಪ್ರಸಿದ್ಧವಾಗಿವೆ. ಅವರನ್ನು ಕುರಿತೂ ಕೆಲವು

ಪ್ರಸಿದ್ಧ ಪುಸ್ತಕಗಳಿವೆ. ಆದರೆ ಎಲ್ಲ ವಿಜ್ಞಾನಿಗಳಂತೆ ಅವರು ಕೂಡ ಮೌಲಿಕ ವಾಙ್ಮಯಕ್ಕೆ ಮಹತ್ವವಿತ್ತಿದ್ದಾರೆ. ಸ್ವತಃ ರಾಮನ್‌ರು ತಮಿಳು ಭಾಷಕರು. ಅವರ ಶಿಕ್ಷಣವೆಲ್ಲ ಇಂಗ್ಲೀಷಿನಲ್ಲಿಯೇ ಆದುದು, ಆದರೆ ಭಾರತದಲ್ಲಿಯೇ. ಹೀಗಾಗಿ ಇಂಗ್ಲೀಷ್‌ನ ಪ್ರಭುತ್ವವಿದ್ದಷ್ಟು ಅವರಿಗೆ ಇತರ ಭಾಷಾ ಪ್ರಭುತ್ವ ವಿಚಾರ ಬೇಕೆನಿಸಲಿಲ್ಲ. ಅವರ ಆತ್ಮಚರಿತ್ರೆಯನ್ನು ಅವರು ಬರೆಯದಿರುವುದೊಂದು ಕೊರತೆ. ಅವರ ಜೀವನ ಚರಿತ್ರೆಯನ್ನು ಬೇರೆಯವರೂ ಹೆಚ್ಚಾಗಿ ಬರೆದಿಲ್ಲ. ಇಂಗ್ಲೀಷ್‌ನಲ್ಲೊಂದು ಕನ್ನಡದಲ್ಲೊಂದೆರಡು ಪುಸ್ತಕಗಳು ರಾಮನ್ನರ ಜೀವನದ ಬಗ್ಗೆ ಬಂದಿರುವುವು. ಆದರೆ ಅವು ಅವರ ವೈಜ್ಞಾನಿಕ ದರ್ಶನ ಮಾಡಿಸುವುದಿಲ್ಲ. ಜಗತ್ತಿನ ವಿವಿಧ ಭಾಷೆಗಳಲ್ಲಿ ರಾಮನ್‌ರ ವೈಜ್ಞಾನಿಕ ಸಾಧನೆಗಳ ವಿಪುಲ ವಾಙ್ಮಯ ಬಂದಿದೆಯೆಂದು ಹೇಳುವಂತಿಲ್ಲ. ಆಧುನಿಕ ಜಗತ್ತಿನಲ್ಲಿ ವೈಜ್ಞಾನಿಕ ಮನ್ವಂತರವು ಪಶ್ಚಿಮ ದೇಶಗಳಲ್ಲಿ ಕೂಡ ಮಾನವ ಸ್ವಭಾವ ಜಾಡ್ಯಗಳಲ್ಲಿ ಕೆಲವನ್ನು ಮೇಲ್ವಾಯ್ದು ಬೆಳೆದಿಲ್ಲ. ಹೀಗಾಗಿ ರಾಮನ್‌ರನ್ನು ಕುರಿತು ಪಶ್ಚಿಮದ ಅವರ ಸಮಕಾಲೀನ ವಿಜ್ಞಾನಿಗಳನೇಕರ ಬಗೆಗೆ ಬಂದಷ್ಟು ವಾಙ್ಮಯ ಬಂದಿಲ್ಲವೆಂಬುದನ್ನು ವಿಷಾದದಿಂದ ಗಮನಿಸಬೇಕಾಗಿದೆ.

ಈಗಾಗಲೇ ಹೇಳಿದಂತೆ "ಪ್ರೊಸೀಡಿಂಗ್ಸ್" ರಾಮನ್‌ರ ಮುಖ್ಯಪತ್ರಿಕೆ. ಅದರಲ್ಲಿ 'ಎ' ಮತ್ತು 'ಬಿ' ಎಂಬ ಎರಡು ವಿಭಾಗಗಳಿದ್ದು, ಭೌತ ಮತ್ತು ಜ್ಯೋತಿ ಶಾಸ್ತ್ರಗಳಿಗೆ ಸಂಬಂಧಿಸಿ ದಂತೆ ಪತ್ರಗಳು ಪ್ರಕಟವಾಗುತ್ತವೆ. ಜುಲೈ ೧೯೩೪ ರಿಂದ ಪ್ರಾರಂಭವಾದ ಈ ಪತ್ರಿಕೆಯ ಪ್ರಕಟಣೆ ತಡೆಗಡಿಯದೆ ಪ್ರತಿವರ್ಷವೂ ಎರಡು ಸಂಪುಟಗಳನ್ನು ಮಾಡಲಾಗುತ್ತಿದ್ದು,

ಇದೀಗ ೩೪ ವರ್ಷಗಳು ಸಂದಿವೆ. ಪ್ರತಿಯೊಂದು ಸಂಪುಟ ದಲ್ಲಿಯೂ ೩೫೦ ರಿಂದ ೪೦೦ ಪುಟಗಳಿದ್ದು ೧೫ ರಿಂದ ೨೦ ಪುಟ ಗಳ ಚಿತ್ರಗಳೂ, ಮತ್ತು ಸಾಕಷ್ಟು ಅಂಕಿ, ಸಂಖ್ಯೆ, ಗಣಿತ, ವಿವರಗಳೂ ತುಂಬಿರುತ್ತವೆ. ಲೇಖನವನ್ನು ಅಕ್ಯಾಡಮಿಯ ಯಾವನಾದರೊಬ್ಬ ಫೆಲೋ ಶಿಫಾರಸು ಮಾಡಿ ಕಳಿಸಬೇಕು. ಆತ ಕಳುಹಿಸುವ ಮುಂಚೆ ಆ ಲೇಖನವು ಅಕ್ಯಾಡಮಿಯ ಮೀಟಿಂಗ್‌ನಲ್ಲಿ ಓದಲು ಅರ್ಹ ಮತ್ತು ಪ್ರೊಸೀಡಿಂಗ್ಸ್‌ನಲ್ಲಿ ಪ್ರಕಟಿಸಲು ಯೋಗ್ಯ ಎಂದು ತನ್ನ ಮಟ್ಟಿಗೆ ತಾನು ಖಚಿತ ಮಾಡಿಕೊಳ್ಳಬೇಕು. ಲೇಖನವು ೫೦ ಪುಟ ಫೂಲ್‌ಸ್ಕೇಪ್ ನಲ್ಲಿದ್ದು, ಅದರ ಸಾರಾಂಶವು ಲೇಖನದ ಕೊನೆಗೆ ೩೫೦ ಶಬ್ದ ಗಳಿಗೂ ಮಿಕ್ಕದಂತೆ ಕೊಡಲ್ಪಟ್ಟಿರಬೇಕು. ಲೇಖನದಲ್ಲಿ ಬರುವ ನಕ್ಷೆ ಮತ್ತು ಗಣಿತ ಚಿಹ್ನೆಗಳಾದಿಯಾಗಿ ಮುದ್ರಣದ ಎಲ್ಲವನ್ನೂ ಅಕ್ಯಾಡಮಿಯೇ ವಹಿಸಿಕೊಂಡು, ಅದರ ಕರಡುಗಳನ್ನು ತಿದ್ದುವುದಕ್ಕೆ ಮೂಲಲೇಖಕರಿಗೆ ಕಳುಹಿಸುವುದಲ್ಲದೆ, ಮುದ್ರಿತ ಪತ್ರಿಕೆಗಳನ್ನೂ, ಮೂಲ ಚಿತ್ರಗಳನ್ನೂ ಅವರಿಗೆ ಕಳುಹಿಸುವ ಏರ್ಪಾಡು ಮತ್ತು ಬ್ಲಾಕುಗಳನ್ನು ಅಲ್ಪ ಬೆಲೆಗೆ ಕೊಡುವ ಕ್ರಮವನ್ನು ಏರ್ಪಡಿಸಿದ್ದಾರೆ. ಹೀಗೆ ಭಾರತದಲ್ಲಿ ವೈಜ್ಞಾನಿಕ ಸಾಹಿತ್ಯ ಪ್ರಕಟಿಸುವ ಸಾಹಸದಲ್ಲಿ ಅತ್ಯುಚ್ಚ ಮಟ್ಟವನ್ನು ಕಾಪಾಡುವ ಪ್ರಯತ್ನವನ್ನು ರಾಮನ್ ಅವರು ಮಾಡಿದ್ದಾರೆಂದು ಹೇಳಬಹುದು.

ರಾಮನ್‌ರ ಸಾಧನೆಗಳನ್ನು ಗುರುತಿಸಿ ಗೌರವಿಸುವುದರಲ್ಲಿ ಜಗತ್ತೇನೂ ತಡ ಮಾಡಿಲ್ಲ; ಅವರಿಗೆ ಮಾನ ಮನ್ನಣೆಗಳನ್ನು ವಿಸ್ತರಿಸುವುದರಲ್ಲಿಯೂ ಹಿಂದೆಗೆದಿಲ್ಲ. ಆದರೆ ಹೋಲಿಕೆಯಿಂದ ನೋಡಿದಾಗ ವೈಜ್ಞಾನಿಕ ಜಗತ್ತಿನಲ್ಲಿಯೂ ಪಡುವಣ ನಾಡು

ಗಳವರು ತಂತಮ್ಮವರ ನೆಗಳ್ತೆಯನ್ನು ಹೇಳಿದಷ್ಟು ಇತರರ ಹಿರಿಮೆ ಗರಿಮೆಗಳನ್ನು, ಹೆಚ್ಚಳ ಹೆಗ್ಗಳಿಕೆಗಳನ್ನು ಎತ್ತಿ ಕೊಂಡಾಡಿಲ್ಲ. ಅಷ್ಟೇ ಅಲ್ಲ ಸೂಕ್ಷ್ಮವಾಗಿ ಸಂದರ್ಭ ಸಾಧಿಸಿ ದಾಗಲೆಲ್ಲ ಅಗ್ಗವಾಡಿ ಅಲ್ಲಗಳೆದು ಎದುರಾಳಿಗಳನ್ನು ಹುಟ್ಟಿಸಿ ಕೊನೆಗೊಮ್ಮೆ ಎಲ್ಲ ಸಾಧನೆಯ ಮೂಲವೂ ತಮ್ಮಿಂದಾಯಿ ತೆಂಬ ಪ್ರಚಾರದ ಬೊಬ್ಬುಳಿಯೆಬ್ಬಿಸಿರುವುದೂ ಉಂಟು. ಹೀಗಾಗಿ ರಾಮನ್‌ರಿಗೆ ಸಲ್ಲಬೇಕಾದ ಪ್ರಚಾರ ಪ್ರಶಂಸೆಗಳು ಸಂದಿಲ್ಲ. ಅಂತೂ ಅವರನ್ನು ವೈಜ್ಞಾನಿಕ ಸಂಶೋಧನೆಯ ನಾಯಕ, ಅನ್ವೇಷಕ ಎಂದೆಲ್ಲ ಎಂದೋ ಒಪ್ಪಿಕೊಂಡಿದೆ. ಅವ ರಿನ್ನೂ ಪ್ರಾಧ್ಯಾಪಕರಾಗಿ ಆರು ವರ್ಷಗಳಾಗಿರಲಿಲ್ಲ, ಆಗಲೇ ಅವ ರಿಗೆ ಲಂಡನ್ನಿನ ರಾಯಲ್‌ಸೊಸೈಟಿಯು ಫೆಲೋ ಆಗಿ ೧೯೨೪ರಲ್ಲಿ ಗೌರವಿಸಿತು. ಮುಂದೆ ನಾಲ್ಕೇ ವರ್ಷಗಳಲ್ಲಿ ಅಂದರೆ ೧೯೨೮ ರಲ್ಲಿ ಇಟಾಲಿಯನ್ ಸೊಸೈಟಿ ಆಫ್ ಸೈನ್ಸ್‌ಸ್‌ನ ಮೆಟ್ಯೂಸೀ ಮೆಡಲ್ ಪ್ರಧಾನವಾದ ಸಮಾರಂಭ ನಡೆಯಿತು. ಮರು ವರ್ಷವೇ ಬ್ರಿಟಿಷ್ ಸರಕಾರವು ಅವರನ್ನು ಸರ್ ಎಂಬ ಬಿರುದು ದಯಪಾಲಿಸಿ ಮನ್ನೆಯರ ವರ್ಗಕ್ಕೆ ಸೇರಿಸಿತು. ಅಲ್ಲಿಂದ ೧೯೩೦ರಲ್ಲಿ ಅವರಿಗೆ ಭೌತವಿಜ್ಞಾನದ ಹ್ಯೂಸ್ ಮೆಡಲ್ ಅನ್ನು ಕೊಟ್ಟರೆ, ಅದೇ ವರ್ಷ ನೋಬೆಲ್ ಪಾರಿತೋಷಕವೂ ಅವರಿಗೆ ದೊರೆತು ಸನ್ಮಾನವಾದ ಐತಿಹಾಸಿಕ ಸಂದರ್ಭ ಸಂಘಟಿಸಿತು.

ಪ್ಯಾರಿಸ್ ವಿಶ್ವವಿದ್ಯಾನಿಲಯದವರು, ಡಿ.ಎಸ್.ಸಿ. ಡಿಗ್ರೀ ಯನ್ನು, ಗ್ಲಾಸ್‌ಗೋ ದವರು ಎಲ್.ಎಲ್.ಡಿ. ಪದವಿಯನ್ನು, ಫ್ರೆಬರ್ಗ್‌ನವರು ಪಿಎಚ್.ಡಿ.ಯನ್ನು ಮತ್ತು ಅಂದಿನ ಭಾರತದ ಕಲಕತ್ತ, ಬಾಂಬೆ, ಮದ್ರಾಸ್, ಬನಾರಸ್, ಡಾಕ್ಕಾ ಮೊದ ಲಾದ ಹಿರಿಯ ವಿಶ್ವವಿದ್ಯಾನಿಲಯಗಳವರು ವಿವಿಧ ಗೌರವ

ಪದವಿಗಳನ್ನು ಕೊಟ್ಟು ಗೌರವಿಸಿದರು. ಅವರು ಜಗತ್ತಿನ ವಿವಿಧ ವಿಶ್ವವಿದ್ಯಾನಿಲಯಗಳ ಅಥವಾ ವೈದುಷ್ಯ ಪೀಠಗಳ ಅರ್ಥಾತ್ ಸೊಸೈಟಿಗಳ ಗೌರವದ ಫೆಲೋ ಅಥವಾ ಸದಸ್ಯರಾಗಿರುವರು. ಅವುಗಳಲ್ಲಿ ಕೆಲವು ಮುಖ್ಯವಾದುವೆಂದರೆ ರಾಯಲ್ ಫಿಲಾಸಫಿಕಲ್ ಸೊಸೈಟಿ ಆಫ್ ಗ್ಲಾಸ್‌ಗೋ, ಜ್ಯೂರಿಚ್ ಫಿಸಿಕಲ್ ಸೊಸೈಟಿ, ದಿ ರಾಯಲ್ ಪಿರಿಶ್ ಅಕ್ಯಾಡಮಿ, ದಿ ಡಚ್ ಅಕ್ಯಾಡಮಿ ಅಫ್ ಮ್ಯೂನಿಚ್ ಮತ್ತು ಮತ್ತು ಹಂಗೇರಿಯನ್ ಅಕ್ಯಾಡೆಮಿ ಆಫ್ ಸೈನ್ಸ್‌ಸ್. ಅವರು ಇಂಡಿಯನ್ ಮ್ಯಾಥಮೆಟಿಕಲ್ ಮತ್ತು ಕೆಮಿಕಲ್ ಸೊಸೈಟೀಸ್, ಇಂಡಿಯನ್ ಸೈನ್ಸ್ ಕಾಂಗ್ರೆಸ್ ಹಾಗೂ ಇನ್ನಿತರ ಭಾರತೀಯ ಸೊಸೈಟಿಗಳಲ್ಲಿಯೂ ಇಂಥ ಗೌರವದ ಫೆಲೋ ಅಥವಾ ಮೆಂಬರ್ ಆಗಿರುವರು. ಹಿಂದೂ ಮತ್ತು ಆಂಧ್ರ ವಿಶ್ವವಿದ್ಯಾನಿಲಯಗಳ ಗೌರವದ ಪ್ರಾಧ್ಯಾಪಕ ಪದವಿಗಳೂ ಇವುಗಳೆಲ್ಲನರಂತೆ ಅವರ ವಯಸ್ಸಿನ ಐವತ್ತರೊಳಗೆಯೇ ದೊರೆತುವು. ಅನಂತರವಂತೂ ಇತ್ತೀಚಿನ 30 ವರ್ಷಗಳಲ್ಲಿ ಅವರಿಗೆ ಭಾರತ ಮತ್ತು ವಿದೇಶಗಳ ವಿಶ್ವವಿದ್ಯಾನಿಲಯಗಳ, ವಿಜ್ಞಾನ ಸಂಸ್ಥೆಗಳ ಗೌರವ ಪದವಿ ಪ್ರಶಸ್ತಿಗಳೂ, ಪಾರಿತೋಷಕ ಪರಮ ಸನ್ಮಾನಗಳೂ ಅನೇಕವಾಗಿ ಸಂದಿರುವುವು.

ರಷ್ಯವೇ ಮೊದಲಾದ ಕಮ್ಯುನಿಸ್ಟ್ ದೇಶಗಳೂ, ಏಷ್ಯದ ದೇಶಗಳೂ, ಐರೋಪ್ಯ ದೇಶಗಳಂತೆ ತಂತಮ್ಮಲ್ಲಿಯ ಸಂಸ್ಥೆಗಳ ಮೂಲಕ ರಾಮನ್‌ರನ್ನು ಗೌರವಿಸಿರುವುದು. ಪ್ರಾಯಶಃ ಪದವಿ, ಪ್ರಶಸ್ತಿ, ಪಾರಿತೋಷಕ, ಸನ್ಮಾನ, ಸ್ಥಾನಮಾನಗಳ ಮಟ್ಟಿಗೆ ಇಷ್ಟೊಂದು ಬೃಹದ್ ವ್ಯಾಪ್ತಿಯಿದ್ದವರು ಜಗತ್ತಿನಲ್ಲಿಯೇ ವಿರಳ. ಆದರೆ ವೈಜ್ಞಾನಿಕ ವಾಙ್ಮಯದಲ್ಲಿ,

ಐತಿಹಾಸಿಕ ದಾಖಲೆಯನ್ನು ಮಾಡುವಾಗ ಪಶ್ಚಿಮವು ಅನುದಾರವಾಗಿ ವರ್ತಿಸಿದೆಯೆಂದು ಕೆಲವೆಡೆ ಅಭಿಪ್ರಾಯ ವುಂಟು. ರಾಮನ್‌ರು ಭೌತ ವಿಜ್ಞಾನ ವಿಶ್ವದಲ್ಲಿ ಮಾಡಿರುವ ಮಹತ್ಕಾರ್ಯವನ್ನೆಲ್ಲ ನೋಡಿದರೆ ಅವರನ್ನು ಐಸ್ಯಾಕ್ ನ್ಯೂಟನ್‌ರ ಸಮಸಮಾನ ಸೇರಿಸುವವರಿದ್ದಾರೆ. ಅವರು ಆರಂಭದಲ್ಲಿ ಹೇಗೆ ಭಾರತದ ನಾಲ್ವರು ರಾಯಲ್ ಸೊಸೈಟಿ ಸದಸ್ಯರಲ್ಲಿ ಒಬ್ಬರಾಗಿದ್ದಾರೋ ಹಾಗೆಯೇ ಸ್ವತಂತ್ರ ಭಾರತದಲ್ಲಿ ನಾಲ್ವರು ಭಾರತರತ್ನರಲ್ಲಿ ಅವರೊಬ್ಬರು. ಬ್ರಿಟಿಷರ ಕಾಲದ ಇಂಥ ಗೌರವದ ಬಿರುದುಗಳಿಗಿತ್ತಷ್ಟೇ ಮಹತ್ವವನ್ನು ಅವರು ಸ್ವತಂತ್ರ ಭಾರತದ ಗೌರವದ ಬಿರುದುಗಳಿಗಿತ್ತಿರುವರು. ಬ್ರಿಟಿಷರ ಬಿರುದುಗಳಿಗೆ ಬೈಯ್ಯುತ್ತಿದ್ದವರೇಕೆ-ಈಗ ಬಿರುದು ಗಳನ್ನು ಕೊಡುತ್ತಿದ್ದಾರೆಂದು ಭಾರತ ಸರಕಾರದ ಬಗ್ಗೆ ಕೆಲವೊಮ್ಮೆ ನಕ್ಕು ಹೇಳುವುದುಂಟು. ರಾಮನ್‌ಗೂ ಅಂಥ ನಗುವಿನಿಂದ ಅದೇ ಮಾತನ್ನು ಹೇಳಿದರೆ ಸಹಜ.

ರಾಮನ್‌ರು ವಿಜ್ಞಾನ ಕ್ಷೇತ್ರಕ್ಕೆ ಕಾಲಿಟ್ಟದ್ದು ಯಾವ ಬಾಹ್ಯ ಪ್ರೇರಣೆ-ಪ್ರೋತ್ಸಾಹಗಳಿಲ್ಲದೆ; ಕೇವಲ ಅವರ ಕುತೂಹಲ ಮತ್ತು ಚಿಕಿತ್ಸಕ ಬುದ್ಧಿಯಿಂದಲೇ. ಆದರೆ ಅವರು ವಿಜ್ಞಾನಿ ಯಾಗಿ ವಿಶ್ವಖ್ಯಾತರಾದರು. ಭೌತವಿಜ್ಞಾನದಲ್ಲಿ ಅವರದು ನಿರಾಡಂಬರ. ಕೇವಲ ಸ್ವಪ್ರಯತ್ನದಿಂದ ಅವರು ವಿಜ್ಞಾನ ಪ್ರಪಂಚದ ಪರಮೋನ್ನತ ಸ್ಥಾನವನ್ನೈದಿದರು. ಅವರ ಪ್ರಯತ್ನ ಗಳನೇಕವು ಫಲಿಸಲು ಅವರ ಸಹಯೋಗಿಗಳೂ, ಶಿಷ್ಯರೂ ಮಾಡಿದ ಕಾರ್ಯವೂ ಕಾರಣ. ಅವರು ಯಾವ ವಿದೇಶೀ ಪ್ರಯೋಗಶಾಲೆಗಳಲ್ಲಿಯೂ ಪರಿಣತಿ ಹೊಂದಿ ಬಂದಿರದ್ದರಿಂದ ಸ್ವಾನುಭವ ಸಿದ್ಧರಾಗಿಯೇ ಅವರು ಬೆಳೆದರು. ಅದೇ ರೀತಿ

ತಮ್ಮ ಶಿಷ್ಯರನ್ನೂ ಬೆಳಸಿದರು. ಅಂತೆಯೇ ವಿಜ್ಞಾನರಂಗದಲ್ಲಿ ರಾಮನ್ ಪರಂಪರೆಗೆ ತನ್ನದೇ ಆದೊಂದು ಸ್ವರೂಪವಿದೆ.ಮುಂದೆ ರಾಮನ್‌ರ ವಿದೇಶ ಸಂದರ್ಶನಗಳು ಹೆಚ್ಚುತ್ತ ಹೋದಂತೆಲ್ಲ, ಅವರ ಜ್ಞಾನಾನುಭವಗಳು ಹೆಚ್ಚಿದವು. ಅವರ ವೈಜ್ಞಾನಿಕ ಕಾರ್ಯಗಳ ಚಟುವಟಿಕೆಗಳಿಗೆ ವಿಶೇಷ ತರಬೇತಿಯ ಸ್ವರೂಪವೂ ಬಂದಿತು. ವೈಜ್ಞಾನಿಕ ನಾಯಕರಾಗಿ ಅವರು ಜಗತ್ತಿನ ಪ್ರಯೋಗ ಶಾಲೆಗಳನ್ನೆಲ್ಲ ಸಂದರ್ಶಿಸಿದರು. ವೇದಿಕೆಗಳನ್ನೂ ಏರಿದರು. ಭಾಷಣಗಳನ್ನು, ಪ್ರತಿಪಾದನೆಗಳನ್ನು ಮಾಡುತ್ತ ಹೊರಟರು. ಅಷ್ಟೇ ಅಲ್ಲ, ವೈಜ್ಞಾನಿಕ ಪ್ರಯೋಗ ಪರಿಣತ ಮತಿಗಳ ಸ್ನೇಹ ಸಂಬಂಧಗಳನ್ನೂ ಸಂಪಾದಿಸಿದರು. ಅವರು ವಿಜ್ಞಾನ ವಿಶ್ವಕುಟುಂಬಕರಾದರು.

ರಾಮನ್‌ರು ಮೊತ್ತಮೊದಲು ಯೂರೋಪನ್ನು ಸಂದರ್ಶಿಸಿದ್ದು ೧೯೨೧ರಲ್ಲಿ ; ಆಕ್ಸ್‌ಫರ್ಡ್‌ನಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಿಶ್ವವಿದ್ಯಾನಿಲಯಗಳ ಮಹಾಸಭೆಯಲ್ಲಿ ಭಾಗವಹಿಸಲು. ಆಗ ಅವರಿಗೆ 33 ವರ್ಷ. ಅಲ್ಲಿಂದ ಮೂರೇ ವರ್ಷಗಳಲ್ಲಿ ಅಂದರೆ ೧೯೨೪ರಲ್ಲಿ ಅವರನ್ನು ಬ್ರಿಟಿಷ್ ಅಸೋಸಿಯೇಷನ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಸಾಯಿನ್ಸ್ ಅನ್ನು ಸೇರುವುದಕ್ಕೆ ಗ್ರೇಟ್ ಬ್ರಿಟನ್‌ಗೆ ಆಮಂತ್ರಿಸಿದಾಗ ಕೆನಡಾ ಸಂಚಾರದ ಏರ್ಪಾಡಾಗಿದ್ದಿತು. ಟೋರೆಂಟೋದಲ್ಲಿ ಬ್ರಿಟಿಷ್ ಅಸೋಸಿಯೇಷನ್ ಮತ್ತು ಇಂಟರ್‌ನ್ಯಾಷನಲ್ ಕಾಂಗ್ರೆಸ್ ಆಫ್ ಮ್ಯಾಥಮೆಟಿಕ್ಸ್ ಇವುಗಳ ಸಂಯುಕ್ತ ಆಶ್ರಯದಲ್ಲಿ ಜ್ಯೋತಿಃಪ್ರಸರಣ ಅಥವಾ ಬೆಳಕಿನ ಹಬ್ಬುಗೆಯ ಬಗ್ಗೆ ಭಾಷಣ ಮಾಡಲು ಅವರನ್ನು ಕೇಳಿಕೊಳ್ಳಲಾಯಿತು. ಈ ಸಭೆಯ ಬಳಿಕ ರಾಮನ್ ಅಮೆರಿಕವನ್ನು ಸಂದರ್ಶಿಸಿದರು ; ಫಿಲಾಡೆಲ್ಫಿಯಾದ

ಫ್ರಾಂಕ್‌ಲಿನ್ ಇನ್‌ಸ್ಟಿಟ್ಯೂಟ್‌ನ ಶತಮಾನೋತ್ಸವದಲ್ಲಿ ಭಾಗವಹಿಸುವುದಕ್ಕಾಗಿ. ಮುಂದೆ ೧೯೨೫ರಲ್ಲಿ ಭಾರತಕ್ಕೆ ಹಿಂತಿರುಗುವುದಕ್ಕೆ ಮುಂಚೆ ಅವರು ಆರ್. ಪ. ಮಲ್ಲಿಕಾನ್‌ನ ಆಮಂತ್ರಣದ ಮೇರೆಗೆ ಪಸದೇನಾದಲ್ಲಿ ನಾಲ್ಕು ತಿಂಗಳುಗಳನ್ನು ವಿಸಿಟಿಂಗ್ ಪ್ರೊಫೆಸರ್ ಆಗಿ ಕಳೆದರು. ಆಗ ಅವರಿಗೆ 32 ವರ್ಷ. ಅದೇ ವರ್ಷ ಅವರು ಅಕ್ಯಾಡಮಿ ಇನ್ ಲೆನಿನ್‌ಗ್ರಾಡ್ ಅಂಡ್ ಮಾಸ್ಕೋ ಇದರ ಬೈಸೆಂಟೆನರಿ ಅಂದರೆ ದ್ವೈ ಶತಮಾನೋತ್ಸವ ದಲ್ಲಿ ಭಾಗವಹಿಸಲು ರಷ್ಯನ್ ಅಕ್ಯಾಡೆಮಿ ಆಫ್ ಸಾಯಿನ್ಸಿಸ್‌ನ ಆಮಂತ್ರಣದ ಮೇರೆಗೆ ಅಲ್ಲಿಗೆ ಹೋಗಿ ಬಂದರು. ಅಲ್ಲಿಂದ ೧೯೨೯ ರಲ್ಲಿ ಫ್ಯಾರಡೇ ಸೊಸೈಟಿಯವರು ಬ್ರಿಸ್ಟಲ್‌ನಲ್ಲಿ ಮೊಲೆಕ್ಯುಲರ್ ಸ್ಪೆಕ್ಟ್ರಾ ಎಂಬ ವಿಷಯದ ಮೇಲೆ ಚರ್ಚೆ ಪ್ರಾರಂಭಿಸಲು ಆಮಂತ್ರಿಸಿದರು.

ಹೀಗೆ ರಾಮನ್‌ರು ಅವರ ೪೦ನೆಯ ವರ್ಷದೊಳಗಾಗಿ ಪ್ರಪಂಚದ ಪ್ರಮುಖ ವಿಜ್ಞಾನ ಕೇಂದ್ರಗಳಲ್ಲಿ ಪ್ರತಿಷ್ಠಿತ ವ್ಯಕ್ತಿ ಯಾದರು. ಮುಂದೆ ೧೯೩೦ರಲ್ಲಿ ನೊಬೆಲ್ ಪಾರಿತೋಷಕವನ್ನು ಸ್ವೀಕರಿಸಲು ಸ್ಟಾಕ್‌ಹೋಂಗೆ ಹೋದಾಗ ಅವರ ಹೆಸರು ವಿಶ್ವ ವಿಖ್ಯಾತವಾಯಿತು. ಮತ್ತೆರಡು ವರ್ಷಗಳಲ್ಲಿ ಪ್ರಸಿದ್ಧ ಪ್ಯಾರಿಸ್, ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಸ್ವೀಕರಿಸಲು ಅಲ್ಲಿಗೆ ಪಯಣಿಸಿದರು. ಮತ್ತು ೧೯೩೭ ರಲ್ಲಿ ಅವರು ಬೊಲೊಸಾ ಮತ್ತು ಪ್ಯಾರೀಸ್‌ಗಳಲ್ಲಿ ಇಂಟರ್ನ್ಯಾಷನಲ್ ಕಾಂಗ್ರೆಸ್ ಆಫ್ ಫಿಸಿಕ್ಸ್‌ನಲ್ಲಿ ಭಾಗವಹಿಸಲು ತೆರಳಿದರು. ಹೀಗೆ ಅವರ ವಯಸ್ಸಿನ ೫೦ರೊಳಗೆ ಅವರು ವಿಜ್ಞಾನ ವಿಶ್ವದ ಎಲ್ಲ ಕೇಂದ್ರ ಗಳಲ್ಲಿಯೂ ಚಿರಪರಿಚಿತರಾಗಿ ಬಿಟ್ಟರು. ಅನಂತರದ ಈ ೩೦ ವರ್ಷಗಳಲ್ಲಿ ಅವರು ಜಗತ್ತಿನ ವಿವಿಧ ದೇಶಗಳಲ್ಲಿ ಸಂಚರಿ

ಸಿದ್ದಾರೆ. ಅವರ ಭಾಷಣ ಮಾಲೆಗಳು ಎಲ್ಲ ಪ್ರಮುಖ ಕೇಂದ್ರ ಗಳಲ್ಲಿ ಆಗಾಗ ಏರ್ಪಟ್ಟಿವೆ. ರಾಮನ್‌ರ ವ್ಯಾಪ್ತಿಯಲ್ಲಿ ಕಾಲ ಸ್ಥಳಗಳೆರಡೂ ಕಿರಿದಾಗಿವೆ; ಜಗತ್ತೇ ಕಿರಿದಾಗಿದೆ. ವಿಜ್ಞಾನಿ ಯಾಗಬೇಕೆಂಬ ತಾಪಸಿಕ ಹಟದಿಂದ ಹೊರಟ ಅವರು ಇಂದಿಗೂ ವಿಜ್ಞಾನಕ್ಕೆ ನಿಷ್ಠರು. ಅವರ ಈ ವೈಯ್ಯಕ್ತಿಕ ಉದಾಹರಣೆಯು ವಿಜ್ಞಾನದ ವಿದ್ಯಾರ್ಥಿಗಳಿಗೆ ಮೇಲುಪಂಕ್ತಿಯೆನಿಸಿರುವುದು. ಅವರ ವೈಜ್ಞಾನಿಕ ಸಂಶೋಧನೆ ಮತ್ತು ಅನ್ವೇಷಣೆಗಳಲ್ಲಿ ಅತ್ಯಂತ ತೀಕ್ಷ್ಣ ಬುದ್ಧಿಮತ್ತೆ ಮತ್ತು ಪೂರ್ಣ ಮೌಲಿಕತೆ ಗಳು ಇರುವುದಂತೂ ಮಹತ್ವದ ಅಂಶವಾಗಿದೆ.

ಇವೆಲ್ಲ ಕಾರಣಗಳಿಂದ, ಅವರು ವಿಜ್ಞಾನಿಯಾಗಿಯೇ ಜೀವನ ವನ್ನು ಪ್ರಾರಂಭಿಸದಿದ್ದರೂ, ವಿಜ್ಞಾನದಲ್ಲಿ ಪ್ರವೇಶ ಮಾಡಿ ಸಾಧನೆಗಳನ್ನು ತೋರಿಸಿದ ಕೂಡಲೇ ಅಂತರರಾಷ್ಟ್ರೀಯ ಮನ್ನಣೆ ಪಡೆದರು. ಹೀಗೆ ಜಾಗತಿಕ ಮನ್ನಣೆ, ಇಂದು ವಿಜ್ಞಾನಾನ್ವೇ ಷಣ ಶಾಲೆಗಳಲ್ಲಿ ಮಾರ್ಗದರ್ಶಕ ಶಿಕ್ಷಕರಾಗಿರುವವರಿಗೆ ಮಾರ್ಗ ದರ್ಶಕ ಶಿಕ್ಷಕರಾಗಿ ಸಾಧಿಸಿದ ಸಾಫಲ್ಯ, ಅದ್ಭುತ ಭಾಷಣಶಕ್ತಿ, ವಿಜ್ಞಾನದಲ್ಲಿ ವ್ಯಾಪಕವಾಗಿ ಹುಟ್ಟಿಸಿದ ಆಸ್ಥೆ – ಆಸಕ್ತಿ, ವೈಜ್ಞಾನಿಕ ರಂಗದ ಸಂಘಟಿತ ನಾಯಕ ಮತ್ತು ಆಡಳಿತಗಾರ ರಾಗಿ ಅವರು ನಿರ್ಮಿಸಿದ ವೈಜ್ಞಾನಿಕ ಕೇಂದ್ರಗಳೂ, ಸಂಸ್ಥೆ ಗಳೂ ಮತ್ತು ವಿಶ್ವವಿದ್ಯಾನಿಲಯಗಳ ವೈಜ್ಞಾನಿಕ ವಿಭಾಗಗಳು ಮೊದಲಾದುವುಗಳ ವ್ಯಾಪ್ತಿ ಮತ್ತು ಭಾರತದ ವೈಜ್ಞಾನಿಕ ಕಾರ್ಯಗಳ ಪ್ರಕಟಣೆಗೆ ಪತ್ರಿಕೆಗಳು, ಚರ್ಚೆಗೆ ವೇದಿಕೆಗಳು ಮತ್ತು ವೈಜ್ಞಾನಿಕ ಹಾಗೂ ಕೈಗಾರಿಕೆ ಕಾರ್ಯಗಳ ಸಮನ್ವಯದ ಪ್ರಯತ್ನದ ಅವರ ಯಶಸ್ಸು – ಇವೆಲ್ಲ ಭಾರತದ ಮೇಲೆ ಅವರ ಸಮಕಾಲದಲ್ಲಿ ಬೀರಿದ ಪ್ರಭಾವ, ಮಾಡಿದ

ಪರಿಣಾಮ ವಿಶಿಷ್ಟ. ಅವರು ಕಳೆದ ೬೦ ವರ್ಷಗಳ ವೈಜ್ಞಾನಿಕ ಜೀವನದಲ್ಲಿ ೨೦೦೦ಕ್ಕೂ ಮಿಕ್ಕು ವಿಜ್ಞಾನಾನ್ವೇಷಕರನ್ನು ಮತ್ತು ಸಂಶೋಧಕರನ್ನು ತಯಾರು ಮಾಡಿದ್ದಾರೆಂದರೆ ಅದೇನೂ ಆಶ್ಚರ್ಯದ ಮಾತಲ್ಲ.

ಈ ಅವಧಿಯಲ್ಲಿ ಅವರು ೧೫೦೦ಕ್ಕೂ ಮಿಕ್ಕು ವೈಜ್ಞಾನಿಕ ಸಂಶೋಧನ ಪತ್ರಗಳನ್ನು ಪ್ರಕಟಿಸಿರುವರು. ಇನ್ನು ಆ ಪತ್ರಗಳು ಅನ್ವೇಷಿಸಿದ ವಿಷಯಗಳೇ ವಿಜ್ಞಾನ ವಿಶ್ವವನ್ನೇ ಆವರಿಸಿವೆ. ಅವರ ವೈಜ್ಞಾನಿಕ ಕುತೂಹಲ, ಆಸ್ಥೆ, ಆಸಕ್ತಿಗಳ ವ್ಯಾಪ್ತಿಯನ್ನು ಮತ್ತು ಆಳವನ್ನು ಅವು ಸೂಚಿಸುತ್ತವೆ. ಧ್ವನಿಕಂಪನ–ಸ್ಪಂದನಗಳ ಚಲನಶಾಸ್ತ್ರ ಸಂಗೀತ ವಾದ್ಯಗಳ ಸಿದ್ಧಾಂತ, ಕಿರಣ ವಕ್ರ ವಿಯೋಜನದ ವಿಶಿಷ್ಟ ಸಮಸ್ಯೆಗಳು, ವಪನ ಮತ್ತು ಅಸ್ಫುಟಿತ ದೃಗ್ಜ್ಯೋತಿಶಾಸ್ತ್ರ, ಆಯಸ್ಕಾಂತ ಮತ್ತು ಕಾಂತ-ಸ್ಫಟಿಕ-ಕ್ರಿಯೆ, ವಿದ್ಯುತ್ ಮತ್ತು ಕಾಂತ ದೃಗ್‌ಜ್ಯೋತಿ ಶಾಸ್ತ್ರ, ಘನ ಮತ್ತು ದ್ರವ ಪದಾರ್ಥಗಳ ಜ್ಯೋತಿ ಸ್ಥಿತಿಸ್ಥಾಪಕತ್ವ, ವಿದ್ಯುನ್ನಿರೋಧಕ ಸ್ವಭಾವ, ಮತ್ತು ಧನ್ಯಾಪಿವೇಗವೇ ಮೊದಲಾದ ವಿಷಯಗಳ ಮೇಲೆ ಅವರು ತಮ್ಮ ೫೦ನೆಯ ವಯಸ್ಸಿನೊಳಗೆಯೇ ಶೋಧನ ಪತ್ರಗಳನ್ನು ಪ್ರಕಟಿಸಿದ್ದರು. ಅಂದರೆ ಆಗ ಅವರ ಅನ್ವೇಷಣ ಕಾರ್ಯ ೩೦ ವರ್ಷಕಾಲ ನಡೆದಿತ್ತು. ಅನಂತರದ ಈ ೩೦ ವರ್ಷಗಳಲ್ಲಿ ಅವರು ದೃಗ್, ಧ್ವನಿ, ಜ್ಯೋತಿ, ವರ್ಣ, ಪವನ, ಭೂಗರ್ಭ, ಭೂಗುಣ– ಇತ್ಯಾದಿಗಳ ಬಗ್ಗೆ ನಡೆಸಿದ ಅನ್ವೇಷಣೆಗಳೂ ಪ್ರಕಟಿಸಿದ ಸಂಶೋಧನಪತ್ರಗಳೂ ಅನೇಕ. ಅವೆಲ್ಲವುಗಳನ್ನು ಸಂಕ್ಷಿಪ್ತವಾಗಿ ಸಾರಭೂತವಾಗಿ ಕೂಡ ಕಣ್ಣು ಹಾಯಿಸಿ ಮಿಣುಕು ನೋಟವೋ ಇಣುಕು ನೋಟವೋ ಕೊಡಲಿಕ್ಕಾಗದಷ್ಟು ಅವುಗಳ ಗಾತ್ರ–ಪಾತ್ರಗಳಿರುವುವು.

ರಾಮನ್‌ರ ಅತ್ಯಂತ ಪ್ರಸಿದ್ಧ ಸಂಶೋಧನೆಯೆಂದರೆ ಅವರ ಹೆಸರಿನಿಂದ ಪ್ರಖ್ಯಾತವಾದ ಅಂದರೆ ರಾಮನ್ ಇಫೆಕ್ಟ್ ಅಥವಾ ರಾಮನ್ ಪರಿಣಾಮ. ಸುಮಾರು ೧೯೨೧ರಿಂದ ಅವರು ಜ್ಯೋತಿಪ್ರಸರಣ ಅಥವಾ ಬೆಳಕಿನ ಹಬ್ಬುಗೆಯ ಬಗ್ಗೆ ೭ ವರ್ಷ ಕಾಲ ನಿರಂತರ ನಡೆಸಿದ ಪ್ರಯೋಗ ಪರೀಕ್ಷೆ, ಅನ್ವೇಷಣೆಗಳ ಫಲವಾಗಿ ಸಿದ್ಧವಾಗಿ ೧೯೨೮ರಲ್ಲಿ ಪ್ರಕಟಿಸಲ್ಪಟ್ಟಿದು. ಅನಂತರದ ಹತ್ತೀ ಹತ್ತು ವರ್ಷಗಳಲ್ಲಿ ಅನ್ವೇಷಕರು ವ್ಯಕ್ತಪಡಿಸಿದ ವಿಷಯ ಗಳನ್ನೆಲ್ಲ ಈ ಸಂಶೋಧನೆಯ ಸಾಧಿಸಿ ತೋರಿಸಿತಲ್ಲದೆ ಭೌತ ಮತ್ತು ರಸಾಯನ ವಿಜ್ಞಾನಗಳ ಮೇಲೆ ವಿಶೇಷ ಪ್ರಭಾವ ಪರಿಣಾಮಗಳನ್ನುಂಟು ಮಾಡಿತು. ರಾಮನ್ ಪರಿಣಾಮ ಸಿದ್ಧಾಂತದ ಮೇಲೆ ವಿಜ್ಞಾನ ವಿಶ್ವದಲ್ಲಿ ವಿಪುಲ ವಾಙ್ಮಯ ಸೃಷ್ಟಿಯಾಗಿದೆ. ಅದಿನ್ನೂ ಸೃಷ್ಟಿಯಾಗುತ್ತಲೇ ಇದೆ. ಅದರಂತೆ ಆ ಪರಿಣಾಮ ಫಲಗಳು ನಿರಂತರ ವಿಸ್ತರಿಸುತ್ತಲೇ ಹೋಗುವಂತೆ ಕಾಣುತ್ತದೆ. ರಾಮನ್‌ರ ಐವತ್ತನೆಯ ಜನ್ಮ ದಿನೋತ್ಸವ ಕಾಲದಲ್ಲಿ ಅವರ ಬಗ್ಗೆ ವಿಶ್ವವಿಖ್ಯಾತ ವಿಜ್ಞಾನಿಗಳು ಮುಖ್ಯವಾಗಿ ಈ ವಿಷಯದ ಮೇಲೆಯೇ ಬರೆದರು. "ಪ್ರೊಸೀಡಿಂಗ್ಸ್"ನ ವಿಶೇಷ ಸಂಚಿಕೆಯೆಂದು ಆ ಲೇಖನಗಳ ಸಂಪುಟವನ್ನು ಸುಂದರ ವಾಗಿ ಪ್ರಕಟಿಸಿದೆ

ರಾಮನ್‌ರು ಇದೀಗ ಹೂವಿನ ಬಣ್ಣಗಳ ಮತ್ತು ಭೂಮಿಯ ಹವಾಮಾನದ ಕುರಿತು ವಿಶ್ಲೇಷಣೆ, ಪೃಥಕ್ಕರಣ, ಅನ್ವೇಷಣೆಗಳಲ್ಲಿ ತೊಡಗಿದ್ದಾರೆ. ಇತ್ತೀಚೆಗಷ್ಟೇ ಅವರು ಮದ್ರಾಸು ಬೆಂಗಳೂರುಗಳಲ್ಲಿ ಇವೆರಡೂ ವಿಷಯಗಳ ಮೇಲೆ ಭಾಷಣ ಗಳನ್ನು ಮಾಡಿದರು. ಪುಷ್ಪವರ್ಣದ ಕುರಿತ ಅವರ ಅನ್ವೇಷಣೆ ಯಿಂದ ವರ್ಣವಿನ್ಯಾಸ ಮತ್ತು ದೃಗ್‌ಜ್ಯೋತಿ ಶಾಸ್ತ್ರಗಳ ಬಗ್ಗೆ

ವಿಶೇಷ ಜ್ಞಾನವು ಹರಡಬಹುದು. ಈ ನಡುವೆ ಅವರು ವಜ್ರದ ಹರಳುಗಳ ಮೇಲೆ ಸಂಶೋಧನ ಕಾರ್ಯವನ್ನು ನಡೆಸಿದ್ದರು. ಅವರ ಸಂಗ್ರಹದಲ್ಲಿ ೨೦೦ಕ್ಕೂ ಮಿಕ್ಕು ವಿಶಿಷ್ಟ ವಜ್ರಗಳಿರುವುವು. ಅಲ್ಲದೆ ೫೦೦೦ರಷ್ಟಾದರೂ ಒಟ್ಟು ವಜ್ರಗಳಿರುವುವು. ಅಲ್ಲದೆ ಅವರ ಪ್ರಯೋಗಶಾಲೆಯಲ್ಲಿ ಭೂಗರ್ಭಶಾಸ್ತ್ರಕ್ಕೆ ಸಂಬಂಧಿಸಿದ ವಸ್ತುಗಳ ಸಂಗ್ರಹವೂ ದೊಡ್ಡದು. ಭೂಗರ್ಭಶಾಸ್ತ್ರದ ವಿದ್ಯಾರ್ಥಿಗಳಿಗೆ ಈ ವಸ್ತುಗಳ ಸಂಗ್ರಹವು ಅತ್ಯಂತ ಉಪಯುಕ್ತ ವಾಗುವಂಥದು. ಅವರು ವಜ್ರಗಳಿಗೆ ಸಂಬಂಧಿಸಿದಂತೆ ನಡೆಸಿದ ಸಂಶೋಧನೆಗಳಿಂದ ಬೆಳಕಿನ ಶಾಸ್ತ್ರದಮೇಲೆ ಹರಡಿದ ಜ್ಞಾನವೂ ಅಪಾರ. ಏಷ್ಯದಲ್ಲಿಯೇ ಪ್ರಾಯಶಃ ಅತ್ಯುತ್ತಮವಾದ ವೀಕ್ಷಣಾಲಯಗಳಲ್ಲಿ ಒಂದಾದ ಅವರ ವೀಕ್ಷಣಾಲಯವು ವೈಜ್ಞಾನಿಕ ಸಂಶೋಧನೆಗೊಂದು ಆಸ್ತಿಯೇ ಸರಿ.

ಅವರು ವಜ್ರಗಳನ್ನು ಜಗತ್ತಿನ ನಾನಾಭಾಗಗಳಿಂದ ಸಂಗ್ರಹಿಸಿದ್ದಾರೆ. ಅದರಂತೆ ಭೂಗರ್ಭಶಾಸ್ತ್ರಕ್ಕೆ ಸಂಬಂಧಿಸಿದ ವಸ್ತುಗಳನ್ನು ಕೂಡ. ವಜ್ರಗಳನ್ನು ಸಂಗ್ರಹಿಸುವ ಅವರ ಆಸಕ್ತಿಯಲ್ಲಿ ಒಂದು ಸ್ವಾರಸ್ಯದ ಸಂದರ್ಭವೊನ್ನು ಒದಗಿಬಂದಿತು. "ನಾನು ಫ್ರಾನ್ಸಿನ ಪ್ರಸಿದ್ಧ ಭೌತವಿಜ್ಞಾನಿಯೊಬ್ಬರ ಜೊತೆಗೆ ಕೆಲವು ವಜ್ರಗಳನ್ನು ಮತ್ತು ಸ್ಫಟಿಕಗಳನ್ನು ಕೊಳ್ಳಲು ಪ್ಯಾರಿಸ್‌ನಲ್ಲಿ ಒಂದುದಿನ ಹೊರಟಿದ್ದೆನು. ಅನ್ವೇಷಣ ದೃಷ್ಟಿಯಿಂದ ನಾನು ಈ ಹರಳುಗಳಲ್ಲಿ ತುಂಬ ಆಸಕ್ತನಾಗಿರುವೆನು, ಕುತೂಹಲಿಯಾಗಿರುವೆನು ಎಂಬುದು ನಿಮಗೆ ಗೊತ್ತಷ್ಟೆ. ಒಂದು ಗಾಜಿನ ಮುಚ್ಚಳದೊಳಗೆ ಎರಡು ಬಲು ಚೆಲುವಾದ ಚಿಟ್ಟೆಗಳನ್ನು ಒಂದು ಅಂಗಡಿಯಲ್ಲಿ ಕಂಡೆ. ಅವೆರಡೂ ಬ್ರಾಜಿಲಿನ ಮೋರ್ಫೋ ಮೂಲದವು ಜಾತಿಯಲ್ಲಿ. ನೀಲವರ್ಣದ ವಿನ್ಯಾಸದಲ್ಲಿ ಅವು ಮಿನುಗು

ತ್ತಿದ್ದವು. ಅವುಗಳನ್ನು ಕೊಂಡು ನನ್ನ ಬಳಿ ಹತ್ತುವರ್ಷ ವಿಟ್ಟುಕೊಂಡೆ. ನಾನಿಲ್ಲಿಗೆ ಬಂದಮೇಲೆ ಇದೊಂದು ಸಮಸ್ಯೆ ಯಾಯಿತು – ಇವೆರಡು ಚಿಟ್ಟೆಗಳನ್ನು ಏನು ಮಾಡುವುದು ? ಇವನ್ನ ಬೀಸಾಡಿಬಿಡಲು ಮನಸ್ಸು ಬಾರದು. ಬಹಳ ದೀರ್ಘ ಕಾಲ ಇವು ನನ್ನೊಡನಿದ್ದಂತಹವು. ಅಲ್ಲದೆ ಇವುಗಳ ಆಕರ್ಷಣೆ ನನಗಿನ್ನೂ ಇದ್ದಿತು. ಅಲ್ಲಿಂದ ನಾನು ಕೇವಲ ಎರಡು ಚಿಟ್ಟೆ ಗಳನ್ನಿಟ್ಟುಕೊಂಡು ಏನು ಮಾಡುವುದೆಂದು ಕೆಲವು ಸಾವಿರ ಚಿಟ್ಟೆಗಳನ್ನೇ ನಾನು ಸಂಗ್ರಹಿಸಿ ಗಾಜಿನ ಮುಚ್ಚಳಗಳಲ್ಲಿಟ್ಟೆ. ಈಗ ಬ್ರೆಜಿಲ್ಲಿನ ಮೋರ್ಫೊಗಳಿಗೆ ದೊಡ್ಡ ಪರಿವಾರವಿದೆ" ಎಂದು ಅವರು ಸಂದರ್ಶಕರಿಗೆ ವಿವರಿಸುವುದುಂಟು.

ರಾಮನ್‌ರಂತಹ ವಿಜ್ಞಾನಿಯು ಮಕ್ಕಳಂತೆ ಚಿಟ್ಟೆಗಳನ್ನೇಕೆ ಸಂಗ್ರಹಿಸಿದ್ದಾರೆಂದು ನೋಡಿದವರಿಗೆ ಆಶ್ಚರ್ಯವಾಗಬಹುದು. ಆದರೆ ವಿಜ್ಞಾನಿಗೆ ಸೃಷ್ಟಿಯ ಎಲ್ಲ ವಸ್ತುಗಳೂ ಮಹತ್ವದವು. ಅವುಗಳ ಗೋಚರ ಸ್ವರೂಪದಲ್ಲಿ ಅಡಗಿರುವ, ಅಗೋಚರವಾಗಿ ಕಾಣುವ ಅನೇಕ ವಸ್ತುಗುಣಗಳನ್ನು ಪರಿಣಾಮ ಫಲಗಳನ್ನು ಕಂಡುಹಿಡಿಯುವುದು ವಿಜ್ಞಾನಿಯ ಕುತೂಹಲ. ಬಣ್ಣ, ಬೆಳಕು, ದನಿ ಇವುಗಳು ರಾಮನ್‌ರನ್ನು ಯಾವಾಗಲೂ ಮೋಹಿ ಸಿವೆ, ಆಕರ್ಷಿಸಿವೆ. ಅವರು ಸಂಗ್ರಹ ಮಾಡಿದ ಚಿಟ್ಟೆಗಳ ಚೆಲುವನ್ನು ನೋಡಿದಾಗ ಅವರ ಬುದ್ಧಿಮತ್ತೆಯ ವರ್ಣಮಮ ತೆಯ ಅರಿವಾಗುವುದು. ಹೂವಿನ ವರ್ಣಗಳ ಬಗ್ಗೆ ವಿವರಿಸುತ್ತ ಅವರು ಕಂಡುಹಿಡಿದಿರುವ ಅಂಶವು ಹೇಗೆ ಇದುವರೆಗೆ ವಿಜ್ಞಾನ ಲೋಕದಲ್ಲಿ ಕಂಡುಬಂದುದಕ್ಕಿಂತ ವ್ಯತ್ಯಾಸವಾದುದು ಎಂಬು ದನ್ನು ವಿವರಿಸುತ್ತ ರಾಮನ್‌ರು ಸಂದರ್ಶಕರಿಗೆ ತನ್ನ ತೋಟದ ನೀಲಪುಷ್ಪರಾಜಿಯ ವೃತ್ತವೊಂದರ ಕಡೆ ಬೊಟ್ಟುಮಾಡಿ

ತೋರಿಸಿ "ನೋಡಿ ಅದೆಷ್ಟು ಚೆಂದವಾಗಿದೆ" ಎಂದು ಕವಿಭಾವದಲ್ಲಿ ತಲ್ಲೀನರಾಗುತ್ತಾರೆ. ಮಾತುಕತೆಗಳಲ್ಲಿ ರಾಮನ್‌ರ ಭಾವಾವೇಶ ಇನ್ನೂ ಹೊಸ ಹರೆಯದ ಏರುಜವ್ವನದ ಹುಡುಗರಂತಿದೆ.

ರಾಮನ್‌ರು ವೈಜ್ಞಾನಿಕ ಗ್ರಂಥಕಾರರೂ ಹೌದು. ಅವರು ಈಗ ಫಿಸಿಯಾಲಜೀ ಆಫ್ ವಿಜನ್ ಎಂಬ ಗ್ರಂಥವನ್ನು ಪರಿಸಮಾಪ್ತಿಗೊಳಿಸುತ್ತಿದ್ದಾರೆ. ಮುಖ್ಯವಾಗಿ ವರ್ಣಾಂಧತೆ-ಕಲರ್ ಬ್ಲೈಂಡ್‌ನೆಸ್ ಎಂಬುದರ ಬಗ್ಗೆ ಅವರ ಸಿದ್ಧಾಂತವು ವಿಜ್ಞಾನದ ಈ ವಿಶಿಷ್ಟ ರಂಗದಲ್ಲಿ ಪ್ರಸಿದ್ಧವಾಗಿರುವುದು. ಇದು ಡಾಲ್ಟೋನಿಸಂ ಎಂದು ಕೂಡ ಪ್ರಸಿದ್ಧವಾಗಿರುವುದು. ಕಾರಣ ಪ್ರಸಿದ್ಧ ಫ್ರೆಂಚ್ ಅಣುವಿಜ್ಞಾನಿಯಾದ ಡಾಲ್ಟನ್ ಅವರು ಸ್ವತಃ ವರ್ಣಾಂಧತೆಯ ರೋಗದವರಾಗಿದ್ದು ಆ ವಿಷಯದ ಮೇಲೆ ಅತ್ಯಂತ ಪ್ರಬುದ್ಧವಾದ ಕೃತಿಯೊಂದನ್ನು ಬರೆದರು. ಕೇವಲ ಕೆಂಪು ಮತ್ತು ಹಸಿರು ಬಣ್ಣಗಳಿಗೆ ಸಂಬಂಧಿಸಿದಂತೆಯೇ ಪ್ರಾಥಮಿಕ ವರ್ಣವೇದನೆಯು ಪರಿಮಿತವಾಗಿದೆಯೆಂಬ ಹಳೆಯ ಸಿದ್ಧಾಂತವನ್ನು ರಾಮನ್‌ರ ಸಿದ್ಧಾಂತವು ಭಗ್ನಗೊಳಿಸಿತು. "ದೃಗ್ಗೋಚರ ವರ್ಣಗಳೆಲ್ಲ ಪ್ರಾಥಮಿಕ ವರ್ಣಗಳು" ಎಂದು ಎತ್ತಿ ತೋರಿಸಿದರು. "ಹಳದಿಯ ಬೆಳಕಿನ ಅತಿಗ್ರಾಹಕತೆಯಿಂದಾಗಿ ವರ್ಣದೃಗ್‌ವಿಮೋಹವು ಉಂಟಾಗುತ್ತದೆ" ಎಂದು ಅವರು ಸಾರಿದರು. ಮುಂದುವರೆದು "ಹಳದಿಯ ಬಣ್ಣವು ಪ್ರಾಥಮಿಕ ವರ್ಣವಷ್ಟೇ ಅಲ್ಲ, ಅತ್ಯಂತ ಪ್ರಬಲವಾದ ದೃಗ್‌ವೇದನೆಯಿರುವಂತಹದು" ಎಂದೂ ಸಿದ್ಧಾಂತಿಸಿದರು. ಇದು ಈಗ ವಿಖ್ಯಾತ ತತ್ವ.

"ರಾಮನ್ ಸ್ಪೆಕ್ಟ್ರೋಗ್ರಫಿ" ಯೆಂಬುದು ಕೆಲವು ಕಾಲ ಮೂಲೆ ಸೇರಿದ್ದ ಮಹತ್ಕೃತಿ. ಅದು ಈಗ ಮತ್ತೆ ವಿಶೇಷ ಮಹತ್ವವನ್ನು

ಪಡೆದಿರುವುದು. ಅದರಲ್ಲಿಯೂ 'ಲೇಸರ್'ನ ಸಂಶೋಧನೆಯ ನಂತರ ಅದರ ಮಹತ್ವವು ವಿಶಿಷ್ಟ ಸ್ವರೂಪವನ್ನು ಪಡೆದಿರುವುದು. ಆ ಬಗ್ಗೆ ತೀರ ಉದಾಸೀನ ಭಾವದಿಂದ "ವೈಜ್ಞಾನಿಕ ಜಗತ್ತಿನಲ್ಲಿ ಹೀಗಾಗಿದೆ ನೋಡಿ, ಇದರಲ್ಲಿ ವಿಶೇಷವೇನೂ ಇಲ್ಲ" ಎಂದು ಹೇಳುತ್ತಾರೆ. ನ್ಯೂಯಾರ್ಕ್‌ನ ಪ್ಲೀನವ್ ಪ್ರೆಸ್‌ನವರು "ರಾಮನ್ ಸ್ಪೆಕ್ಟ್ರೋಗ್ರಫಿ-ಥಿಯರಿ ಅಂಡ್ ಪ್ರಾಕ್ಟೀಸ್" ಎಂಬ ಪುಸ್ತಕವನ್ನು ಇತ್ತೀಚೆಗಷ್ಟೇ ಪ್ರಕಟಿಸಿರುವರು. ಅವರ ಈಗಿನ ಪುಸ್ತಕ ಪುಷ್ಪವರ್ಣಗಳಿಗೆ ಸಂಬಂಧಿಸಿದ್ದೆಂದು ಆಗಲೇ ಹೇಳಿದೆಯಷ್ಟೆ. ಅದಾದರೂ ವೈಜ್ಞಾನಿಕ ಜಗತ್ತಿನಲ್ಲಿ ವಿಶೇಷ ಪರಿಣಾಮ ಫಲಗಳನ್ನು ನೀಡಬಹುದೆಂದು ನಿರೀಕ್ಷಿಸಲಾಗುತ್ತಿದೆ. ಭೂಮಿಯ ಮೇಲಿನ-ಹವಾಮಾನದ ಬಗ್ಗೆ ಅವರ ವೈಜ್ಞಾನಿಕ ಆವಿಷ್ಕಾರಗಳು ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟು ಮಾಡುವುದು ಸಹಜವೇ ಇದೆ. ಏಕೆಂದರೆ ಅದರ ಬಗ್ಗೆ ಪ್ರಸ್ತಾಪಿಸುತ್ತ ರಾಮನ್‌ರು– ಮನುಷ್ಯನು ಭೂಮಿಯ ಮೇಲಿನ ವಾತಾವರಣವನ್ನು ಸರಿಯಾಗಿ ತಿಳಿದುಕೊಂಡರೆ ಅನೇಕ ನೈಸರ್ಗಿಕ ಅಪಾಯಗಳನ್ನು ಯಶಸ್ವಿಯಾಗಿ ಎದುರಿಸಬಹುದು ಎನ್ನುತ್ತಾರೆ.

ಭೂಮಿಯು ತನ್ನ ಅಕ್ಷದ ಸುತ್ತಲೂ ೨೪ ತಾಸುಗಳಲ್ಲಿ ಒಮ್ಮೆ ಸುತ್ತುವಾಗ ಅದರ ಸುತ್ತಲಿನ ವಾತಾವರಣವೂ ಸುತ್ತುವುದೇ ? ಭೂಮಿಗಿಂತ ಹೆಚ್ಚು ವೇಗ ಅಥವಾ ಕಡಮೆ ವೇಗದಿಂದ ವಾತಾವರಣವು ಚಲಿಸಲಾರದು. ಹಾಗೇನಾದರೂ ಆಗಿದ್ದರೆ ಗಾಳಿಯು ಒಂದಿಲ್ಲೊಂದು ನಿಟ್ಟಿನಲ್ಲಿ ಸತತವೂ ಚಲಿಸುತ್ತಿರಬೇಕಾಗುತ್ತಿತ್ತು. ವಾತಾವರಣವು ಭೂಮಿಯ ವೇಗದಲ್ಲಿಯೇ ಚಲಿಸಿದ್ದಾದರೆ, ಉಗಿ ಹವೆಯ ಪ್ರವಾಹವಾಗಲೀ ಇತರ ಪ್ರವಾಹಗಳಾಗಲೀ ಹುಟ್ಟಲು ಕಾರಣವಿಲ್ಲ. ಆದ್ದರಿಂದ

ಸಾಮಾನ್ಯನೂ ಅರ್ಥ ಮಾಡಿಕೊಳ್ಳುವಂತೆ ರಾಮನ್ ಕೊಡುವ ವಿವರಣೆಯೆಂದರೆ, ವಾತಾವರಣವು ಬೇರೆ ಬೇರೆ ಎತ್ತರದಲ್ಲಿ ಬೇರೆ ಬೇರೆ ಅಕ್ಷಾಂಶ ರೇಖಾಂಶಗಳಲ್ಲಿ ಬೇರೆ ಬೇರೆ ವೇಗದಿಂದ ಚಲಿಸುತ್ತದೆ ಎಂಬುದು. ಅಂತೆಯೇ ವಾತಾವರಣದ ಬಗ್ಗೆ ಸರಿಯಾದ ಜ್ಞಾನವನ್ನು ಬೆಳೆಸಿಕೊಂಡದ್ದಾದರೆ, ಮನುಷ್ಯನು ಹವಾಮಾನದ ಹಲವಾರು ಸಮಸ್ಯೆಗಳನ್ನು ಬಿಡಿಸಲು ಸಾಧ್ಯ ವೆನ್ನುತ್ತಾರೆ ರಾಮನ್. ಅಣುರೇಣುಗಳಿಂದ ಬೆಳಕು ಹರಡಲ್ಪಡು ವಾಗ ಅದರ ವೇಗ ವ್ಯತ್ಯಾಸವಾಗುತ್ತದೆಯೆಂಬ ರಾಮನ್ ಸಿದ್ಧಾಂತದಂತೆ ಈ ಸಿದ್ಧಾಂತವೂ ಪ್ರಸಿದ್ಧವಾಗಬಹುದು. ಅನ ರಲ್ಲಿಯೂ ಈಗ ಮನುಷ್ಯನು ಬಾಹ್ಯಾಂತರಿಕ್ಷಯಾನದ ಅವಸರ ದಲ್ಲಿ ಅನೇಕ ವಾತಾಯನ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ; ಪರಿಹರಿಸಲು ಪೇಚಾಡುತ್ತಿದ್ದಾನೆ.

ವಿಜ್ಞಾನಿ ರಾಮನ್‌ರು ಇಂದು ಏಕಾಕಿತನವನ್ನು ತಾನೈ ತಂದುಕೊಂಡಿದ್ದರೂ, ಅವರನ್ನು ಸಂದರ್ಶಿಸುವಂಥ ಜಾಗತಿಕ ವಿಜ್ಞಾನಿಗಳಿಗೆ ಕೊರತೆಯಿಲ್ಲ. ಅವರ ಲಂಸೆಯ ವಯಸ್ಸಿ ನಲ್ಲಿಯೂ ಇಬ್ಬರು ನೊಬೆಲ್ ಪಾರಿತೋಷಕ ವಿಜೇತ ವಿಜ್ಞಾನಿ ಗಳು ಅವರನ್ನು ಸಂದರ್ಶಿಸಿ ಮಾತನಾಡಿ ಹೋದರು. ಮದ್ರಾಸಿ ನಲ್ಲಿರುವ ಲಕ್ಷಾವಧಿಯ ಆಸ್ತಿಪಾಸ್ತಿಗಳನ್ನೆಲ್ಲ ಕೊಟ್ಟು ತಮ್ಮ ಅಕ್ಯಾಡಮಿಯನ್ನು ಬೆಳಸಬೇಕೆಂದು ರಾಮನ್‌ರು ಬಯಸಿರು ವರು. ಅವರಿಂದು ಮನಸ್ಸು ಮಾಡಿದರೆ ಕೇಂದ್ರ ಸರಕಾರವೋ, ರಾಜ್ಯಸರಕಾರವೋ ಅಥವಾ ಖಾಸಗಿವ್ಯಾಪಾರೋದ್ಯಮ ದಾರರೋ ಇಲ್ಲವೇ ವಿದೇಶಗಳವರೋ ಅವರು ಬಯಸುವಂಥ ಆರ್ಥಿಕ ನೆರವನ್ನು ನೀಡಲು ಮುಂದೆ ಬರಬಹುದು. ಆದರೆ ರಾಮನ್‌ರಿಗೆ ಸಂಪೂರ್ಣ ಸ್ವತಂತ್ರವಾಗಿ ಎಲ್ಲವನ್ನೂ ಇಟ್ಟು

ಕೊಳ್ಳುವ ಇಚ್ಛೆಯೇ ಪ್ರಬಲವಾಗಿದೆ. ಅಂತೆಯೇ ಅವರು ಇತ್ತೀಚೆಗಷ್ಟೇ ಕೇಂದ್ರ ಶಿಕ್ಷಣ ಮಂತ್ರಿ, ಡಾಕ್ಟರ್ ತ್ರಿಗುಣ ಸೇನ್ ಅವರು ಸಹಾಯಕ್ಕೆ ಮುಂದೆ ಮುಂದಾಗಲೂ ಆ ಸಹಾಯವನ್ನು ಸ್ವೀಕರಿಸುವ ಮನ ಮಾಡಲಿಲ್ಲವೆಂದು ತಿಳಿದು ಬರುತ್ತದೆ. ರಾಮನ್‌ರ ಜೀವನದಲ್ಲಿ ಇದೀಗ ಇನ್ನೊಂದು ಘಟ್ಟ. ಅವರ ಭವಿಷ್ಯತ್ ಯೋಜನೆಯನ್ನು ಇನ್ನೂ ಅವರು ಸ್ಪಷ್ಟ ಹೇಳಿಲ್ಲ.

ರಾಮನ್‌ರ ಮಗ ರಾಧಾಕೃಷ್ಣ ಅವರು ಆಸ್ಟ್ರೇಲಿಯಾದಲ್ಲಿ ದೊಡ್ಡ ವಿಜ್ಞಾನಿಯಾಗಿ ಸರಕಾರದ ಸೇವೆಯಲ್ಲಿ ದೊಡ್ಡ ಹುದ್ದೆಯಲ್ಲಿರುವರು. ಭಾರತದಿಂದ ಹೀಗೆ ಮೇಧಾವಿಗಳು ಕಲಿತು ಪರಿಣತರಾದಂತೆ ವಿದೇಶಗಳಿಗೆ ಹೋಗುತ್ತಿರುವ ಬಗ್ಗೆ ರಾಮನ್‌ರ ಅಭಿಪ್ರಾಯವೆಂದರೆ "ಈ ದೇಶದಲ್ಲಿ ಅವರಿಗೆ ಏನೂ ಮಾಡಲು ಅವಕಾಶವಿಲ್ಲದಿದ್ದರೆ ಅವರು ವಿದೇಶಗಳಲ್ಲಿಯಾದರೂ ಹೋಗಿ ಪ್ರಕಾಶಿಸಲಿ; ಮಾನವ ಸಮಾಜಸೇವೆ ಮಾಡಲಿ" ಎಂಬುದಾಗಿದೆ. ಅಂತೂ ಪ್ರತಿಯೊಬ್ಬನ ಬುದ್ಧಿಯ ಪರಮಾವಧಿ--ಉಪಯೋಗವಾಗಬೇಕೆಂಬುದು ರಾಮನ್‌ರ ದೃಷ್ಟಿ. ಅದೂ ಮಾನವ ಸಮಾಜಸೇವೆಯಲ್ಲಿ. ಆದರೆ ಇಂಥ ರಾಮನ್‌ರ ಬಗ್ಗೆಯೇ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ತಾತಾ ವಿಜ್ಞಾನ ಮಂದಿರದಲ್ಲಿ ಹಾಗು ಅವರ ಸ್ವಂತ ಅಕ್ಯಾಡಮಿಯಲ್ಲಿ ಮೇಧಾಶಕ್ತಿಯಿರುವ ಪ್ರತಿಯೊಬ್ಬರಿಗೂ ಏಕಪ್ರಕಾರವಾದ ಅವಕಾಶ ದೊರೆಯಲಿಲ್ಲವೆಂಬ ಆಕ್ಷೇಪಗಳಿವೆ. ಕೆಲವು ಸಂದರ್ಭಗಳಲ್ಲಿಯಾದರೂ ಈ ಬಗ್ಗೆ ವಿವಾದಗಳಾಗಿರುವುದನ್ನು ಮರೆಯುವಂತಿಲ್ಲ. ಅಂತೂ ರಾಮನ್‌ರು ಇಂಥ ಅನೇಕ ವಿಷಯಗಳಲ್ಲಿ ವಾದಗ್ರಸ್ತ ವ್ಯಕ್ತಿಯಾಗಿದ್ದಾರೆಂಬುದು ನಿಜ.

ಭಾರತದ ಮತ್ತು ವಿದೇಶಗಳ ಅನೇಕ–ವಿಜ್ಞಾನಿಗಳ ಸಾಧನೆಗಳ ಬಗ್ಗೆ ರಾಮನ್‌ರ ಅಭಿಪ್ರಾಯಗಳು ಅವರದಾದ ರೀತಿಯಲ್ಲಿ ವಿಲಕ್ಷಣವಾಗಿವೆ. ಜಾಗತಿಕ–ವಿಜ್ಞಾನಿಗಳ ರಂಗದಲ್ಲಿ ವಿಜ್ಞಾನದ ಕೆಲವು ವಿಶೇಷ ಆವಿಷ್ಕಾರಗಳ ಬಗ್ಗೆ ಅವರ ವಾದವಿವಾದಗಳು ಪ್ರಸಿದ್ಧವಾಗಿವೆ–ಭಾರತೀಯ ವಿಜ್ಞಾನಿಗಳನ್ನು ಕುರಿತು ಮಾತನಾಡುವಾಗ ಗುರುತಿಸಬಲ್ಲ ಎತ್ತರದವರ ಮೇಲೆಯೂ ಅವರ ತೀಕ್ಷ್ಣ ಟೀಕೆಯ ಉಗ್ರಾಸ್ತ್ರಗಳು ಹೊರಟಿರುತ್ತವೆ. ಅಷ್ಟಕ್ಕೆಯೇ ಅವರು ಸಮಾಧಾನಗೊಳ್ಳುವುದಿಲ್ಲ. ಈ ವಿಜ್ಞಾನಿಗಳು ತಾವು ತಾವು ಪ್ರಸಿದ್ಧರಾಗಿರುವ ರಂಗಗಳಲ್ಲಿಯಾದರೂ ಎದ್ದುಕಾಣುವ ಸಾಧನೆಗಳನ್ನು ಮಾಡಿ ತೋರಿಸಬೇಕಾದುದು ನ್ಯಾಯವೆಂದು ಎತ್ತಿ ಆಡುತ್ತಾರೆ. ವೈಜ್ಞಾನಿಕ ಸಾಧನೆಗಳ ಬಗ್ಗೆ ರಾಮನ್‌ರಿಗಿರುವ ನಿಷ್ಠೆಗೆ ಅವರ ಈ ಮಾತೇ ಸಾಕ್ಷಿ. ಭಾರತದ ಅಥವಾ ಜಾಗತಿಕ–ವೈಜ್ಞಾನಿಕ–ಪ್ರಗತಿಯ ಬಗ್ಗೆ ಅವರು ಹೆಚ್ಚೇನೂ ಹೇಳುತ್ತಿರುವುದಿಲ್ಲ. ಅಥವಾ ಸಾರ್ವತ್ರಿಕ ವಿಷಯಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಮಾತನಾಡುವುದೂ ಇಲ್ಲ. ಹೆಚ್ಚಾಗಿ ವೈಜ್ಞಾನಿಕ–ವಿಷಯಗಳ ಬಗ್ಗೆಯೇ ಮಾತು.

ಆದರೂ ಸಂವಾದದಲ್ಲಿ ಚತುರರು. ಹಾಸ್ಯ–ವ್ಯಂಗ್ಯ–ವಿಡಂಬನೆಗಳಿಗೆ ಅವರ ಮಾತಿನಲ್ಲಿ ಕೊರತೆಯಿಲ್ಲ. ನನ್ನನ್ನು ಅರ್ಥ ಮಾಡಿಕೊಂಡಿರೋ? – "ಡು ಯು ಅಂಡರ್‌ಸ್ಟಾಂಡ್ ಮಿ" ಇದು ರಾಮನ್‌ರೊಡನೆ ಸಂಭಾಷಿಸುವಾಗ ಪದೇ ಪದೇ ಬರುವ ವಾಕ್ಯ. ಅವರು ಆರೋಗ್ಯದ ಬಗ್ಗೆ ವಿಶೇಷ ಲಕ್ಷ್ಯ ವಹಿಸಿದ್ದಾರೆಂದು ಹೇಳುವಂತಿಲ್ಲ. ಅಂಥ ಮೃದುಮಧುರ ಜೀವನದ ಗಾಳಿ ಅವರನ್ನು ಸೋಂಕಿಲ್ಲ. ಸಾಧಕನ ಹಟದ ಜೀವನವವರದಾದುದ

ರಿಂದ ಯಾವಾಗಲೂ ಉಳಿ - ಸಾಣೆ ಹತ್ತದ ಉದ್ಭವ ಮೂರ್ತಿ ಯಂತೆ ಅವರು ಯಾವ ಛಳಿ ಮಳೆ ಗಾಳಿಗಳಿಗೂ ಗಟ್ಟಿ. ಒಮ್ಮೆ ಕೆಲವರ್ಷಗಳ ಹಿಂದೆ ಅವರ ಆರೋಗ್ಯ ಭಿನ್ನ– ಜೀರ್ಣ ಸ್ಥಿತಿ ಯಲ್ಲಿದ್ದಾಗ ಸಾಕಷ್ಟು ಸಮಯ ಚಿಕಿತ್ಸೆ ಪಡೆಯಬೇಕಾದ ಪ್ರಮೇಯವುಂಟಾಗಿತ್ತು. ಇಂದು ರಾಮನ್‌ರಿಗೆ ಅವರ ಸಂಬಂಧಿಕರೂ ಅನುಬಂಧಿಗಳೂ ಇದ್ದಾರೆನ್ನುವುದಕ್ಕಿಂತಲೂ ಲೇಡಿ ಲೋಕಸುಂದರಿ ರಾಮನ್ ಅವರಿಗಿದ್ದಾರೆಂದರೆ ತಪ್ಪಲ್ಲ. ಆಕೆಯೇ ಸಂಬಂಧ ಸಂಪರ್ಕಗಳನ್ನು ಹೆಚ್ಚಾಗಿ ಇಟ್ಟುಕೊಂಡಿರು ವರು. ರಾಮನ್‌ರು ತಮ್ಮ ವಿಜ್ಞಾನಲೋಕದಲ್ಲಿ ತಾವೇ ತಾವಾಗಿದ್ದಾರೆ.

ಲೇಡಿ ರಾಮನ್ ಅವರು ಸಾಕಷ್ಟು ಕಲಿತು ಓದಿಕೊಂಡವರು. ಸರ್ ರಾಮನ್‌ರೊಡನೆ ವಿದೇಶಗಳಲ್ಲಿ ಸಂಚರಿಸಿದವರು. ಗಂಡ ನಂತೆ ಅಸ್ಖಲಿತವಾಗಿ ಭಾಷಣ ಕೂಡ ಮಾಡಬಲ್ಲರು. ಅವರು ಮಕ್ಕಳ, ನಿರ್ಗತಿಕರ ಮತ್ತು ಅಂಗವಿಕಲರೇ ಮುಂತಾದವರ ಮಾನವೀಯ ಸೇವೆಯಲ್ಲಿ ವಿಶೇಷ ಆಸಕ್ತರು. ಇಂದು ರಾಮನ್ ದಂಪತಿಗಳು ಇಂಡಿಯನ್ ಅಕ್ಯಾಡಮಿ ಆಫ್ ಸೈನ್ಸಸ್ ಅಥವಾ ರಾಮನ್ ಇನ್‌ಸ್ಟಿಟ್ಯೂಟ್‌ನ ಆವರಣದಲ್ಲಿಯೇ ಇರುವ ವಾಸ ಗೃಹದಲ್ಲಿಯೇ ವಾಸಿಸಿರುವರು. ರಾಮನ್‌ರು ಇಂದಿಗೂ ಸಾಂಪ್ರ ದಾಯಿಕ ನಿಷ್ಠೆ– ಶ್ರದ್ಧೆಗಳ ಜೀವನದಲ್ಲಿ ಸಂಬಂಧ ಸಂಪರ್ಕ ಗಳನ್ನು ಕಡಿದುಕೊಂಡವರಲ್ಲ. ಸಾರ್ವಜನಿಕ ವಾಚನಾಲಯವೇ ಮೊದಲಾಗಿ ನಗರದ ಕೆಲ ವಾಚನಾಲಯಗಳಲ್ಲಿಗೆ ಅವರು ಆಗಾಗ ಹೋಗುವುದುಂಟು. ಬ್ಯಾಂಕು ಮೊದಲಾದ ವ್ಯವಹಾರಗಳಿಗೆ ಅವರೇ ಸ್ವತಃ ಹೋಗಿಬರುತ್ತಿರುತ್ತಾರೆ. ಅಂಥ ಕೆಲವು ವ್ಯವ

ಹಾರ ಲೋಕದ ವಿಷಯಗಳಲ್ಲಿ ಕೈತೊಡಗಿಸಿಕೊಂಡಿದ್ದರೂ ವಿಜ್ಞಾನದ ಆವಿಷ್ಕಾರಗಳಿಗೇ ಜೀವನವನ್ನು ಮುಡುಪಾಗಿಟ್ಟಿರುವವರು ಅವರು. ನಿಜವಾಗಿಯೂ ವಿಜ್ಞಾನ ದೇಗುಲದ ಜ್ಞಾನ ದೀಪ್ತಿ ಅವರು.

ಈ ಮಾಲೆಯ ಇತ್ತೀಚಿನ ಪ್ರಕಟಣೆಗಳು

೧೫೦ ಸಸ್ಯ ಸಂರಕ್ಷಣೆ
ಎಂ. ಚಿನ್ನಸ್ವಾಮಿರೆಡ್ಡಿ

೧೫೧ ರಾಘವಾಂಕ
ರಾಮೇಗೌಡ

೧೫೨ ಅರವಿಂದರು
ಉ. ಕಾ. ಸುಬ್ಬರಾಯಾಚಾರ್

೧೫೩ ಮುದ್ರಾರಾಕ್ಷಸ
ಡಾ|| ಎನ್. ಎಸ್. ಅನಂತರಂಗಾಚಾರ್

೧೫೪ ಮೂರನೆಯ ಮಂಗರಸ ಕವಿ
ಹಂಪ. ನಾಗರಾಜಯ್ಯ

೧೫೫ ನಾಗಚಂದ್ರ
ಸಿ. ಪಿ. ಕೃಷ್ಣಕುಮಾರ್

೧೫೬ ಗೋಧಿ
ಜಿ. ವಿ. ಬಿ. ನಾಯ್ಡು

೧೫೭ ಆಲ್ಕೋಹಾಲ್
ಕೆ. ಎಸ್. ಲಕ್ಷ್ಮಣರಾವ್

೧೫೮ ವಡ್ಡಾರಾಧನೆ
ಹಂಪ. ನಾಗರಾಜಯ್ಯ

೧೫೯ ಕಾರೊಲಸ್ ಲಿನೆಯಸ್
ಎಚ್. ಕೆ. ಮಲ್ಲಿಕಾರ್ಜುನಪ್ಪ